# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಫೆಬ್ರವರಿ 8, 2025

ಸಂಪುಟ : 51 ಸಂಚಿಕೆ : 267 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ತರಳಬಾಳು ಹುಣ್ಣಿಮೆ ಸಾಂಸ್ಕೃತಿಕ-ಶೈಕ್ಷಣಿಕ ಉತ್ಸವ

### ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ

ದಾವಣಗೆರೆ, ಫೆ.7- ಪ್ರಸ್ತುತ ದಿನಗಳಲ್ಲಿ ಸಮಾಜವು ಸಂಘಟಿತವಾಗಿ ಉಳಿಯದೆ ವಿಘಟಿತ ಸಮಾಜವಾಗಿದೆ. ಸಮಾಜವು ಇರುವುದು ಸಂಘರ್ಷಕ್ಕಲ್ಲ, ಬದಲಾಗಿ ಪರಸ್ಪರ ಸಂಬಂಧಕ್ಕೆ. ಅದನ್ನು ಈ ತರಳಬಾಳು ಹುಣ್ಣಿಮೆ ಮಹೋತ್ಸವದ ವೇದಿಕೆಯಿಂದ ಕಲಿಯಬೇಕು ಎಂದು ಹಿರಿಯ ಸಾಹಿತಿ, ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಗೊ.ರು. ಚನ್ನಬಸಪ್ಪ ಪ್ರತಿಪಾದಿಸಿದರು.

ಅವರು ಶುಕ್ರವಾರ ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಇಲ್ಲಿವರೆಗೆ ನಡೆದಿರುವ 77 ತರಳಬಾಳು ಹುಣ್ಣಿಮೆ ಕಾರ್ಯಕ್ರಮಗಳ ಪೈಕಿ ಸುಮಾರು ಹತ್ತರಲ್ಲಿ ಭಾಗವಹಿಸಿದ್ದೇನೆ. ಈ ವೇದಿಕೆ ಕೇವಲ ಪದ್ಧತಿಯ ಆಚರಣೆಗಲ್ಲ. ಇದೊಂದು ಸಮಾಜ ಶಿಕ್ಷಣದ ವೇದಿಕೆಯಾಗಿದೆ ಎಂದು ಹೇಳಿದರು.

ಇಲ್ಲಿನ ಚಿಂತನಾ ವಿಷಯಗಳಂತೂ ಸಮಾಜ ಸಂಬಂಧಿಯಾಗಿವೆ. ಇದು ವಿಶೇಷವಾದ ಸಾಂಸ್ಕೃತಿಕ, ಶೈಕ್ಷಣಿಕ ಮಹೋತ್ಸವವಾಗಿದೆ. ಇದು ಮಾದರಿ ಹಾಗೂ ಶಿಸ್ತಿನ ಆಚರಣೆ ಕಾರ್ಯಕ್ರಮ ಎನ್ನುವುದು ಎಲ್ಲರ ಮನೆ ಮಾತಾಗಿದೆ. ಈ ಕಾರ್ಯಕ್ರಮವು ಗಡಿಯಾರ ನೋಡಿಕೊಂಡು ನಡೆಯುತ್ತದೆ ಎನ್ನುವುದಕ್ಕಿಂತ ಗಡಿಯಾರವೇ ಕಾರ್ಯಕ್ರಮ ನೋಡಿ ನಡೆಯುತ್ತದೆ ಎಂದು ಅಭಿಪ್ರಾಯಿಸಿದರು.

ದಿನದಿಂದ ದಿನಕ್ಕೆ ಹದಗೆಡುವ ಸಮಾಜಕ್ಕೆ, ಪ್ರಜ್ಞಾ ಜಾಗೃತಿಗೆ ಅಗತ್ಯವಾದ ಚಿಂತನೆಗಳು ಇಲ್ಲಿ ನಡೆಯುತ್ತವೆ. ಇವುಗಳ ಪೂರ್ಣ ಪ್ರಯೋಜನವನ್ನು ಎಲ್ಲರೂ ಪಡೆಯಬೇಕು ಎಂದು ಗೊ.ರೂ.ಚ. ಕರೆ ನೀಡಿದರು.

ಮೈಸೂರಿನ ಸಾಹಿತಿ ಮತ್ತು ಸಂಶೋಧಕ ಡಾ.ರಾಜಶೇಖರ್ ಜಮದಂಡಿ ಮಾತನಾಡಿ, ಸುಂದರ ಸಮಾಜ ರೂಪಿಸಿಕೊಳ್ಳಲು, ಸುಸಂಸ್ಕೃತ ವ್ಯಕ್ತಿತ್ವ ಬೆಳೆಸಿ ಕೊಳ್ಳಲು ತರಳಬಾಳು ಹುಣ್ಣಿಮೆ ಕಾರ್ಯಕ್ರಮದಿಂದ ಸಾಧ್ಯವಿದೆ ಎಂದು ಹೇಳಿದರು.

ಬಸವಣ್ಣನವರ ನುಡಿಯನ್ನು ನಡೆಯಲ್ಲಿ ತೋರಿಸಿದವರು ವಿಶ್ವಬಂಧು ಮರುಳಸಿದ್ಧರು. ಅವರು ಮೂಢ ನಂಬಿಕೆ, ಕಂದಾಚಾರ, ಜಾತಿ ನಂಬಿಕೆಗಳ ವಿರುದ್ಧ ಜನರಲ್ಲಿ ಅರಿವು (2ನೇ ಪುಟಕ್ಕೆ)

> **ಕನ್ನಡ ಸಾಹಿತ್ಯ, ಶರಣ ಸಾಹಿತ್ಯಕ್ಕೆ ಇಡೀ ಜೀವನ ಮುಡುಪಾಗಿಟ್ಟವರು ಗೊರುಚ: ತರಳಬಾಳು ಶ್ರೀ**
>
> ಗೊ.ರು. ಚನ್ನಬಸಪ್ಪ ಅವರು ಕನ್ನಡ ಸಾಹಿತ್ಯ, ಶರಣ ಸಾಹಿತ್ಯಕ್ಕೆ ತಮ್ಮ ಇಡೀ ಜೀವನ ಮುಡುಪಾಗಿಟ್ಟವರು ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ನುಡಿದರು.
>
> 80 ವರ್ಷಗಳ ಹಿಂದೆ 1945ರಲ್ಲಿ ಹಿರಿಯ ಗುರುಗಳಾದ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಬೀರೂರಿನಲ್ಲಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯದಲ್ಲಿ ಗೊ.ರು. ಚ. ವಿದ್ಯಾರ್ಥಿಯಾಗಿದ್ದರು. ಅಲ್ಲಿ ಆಹಾರದ ಸಮಸ್ಯೆ ಇತ್ತು.
>
> ಒಮ್ಮೆ ಹಿರಿಯ ಗುರುಗಳು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದ್ದಾಗ ಭಾವಿಯ ಸುತ್ತ ಅನ್ನ ಚೆಲ್ಲಲಾಗಿತ್ತು. ಇದನ್ನು ನೋಡಿ ಗುರುಗಳು ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಅನ್ನದಲ್ಲಿ ಹುಳುಗಳು ಇದ್ದುದಾಗಿ ತಿಳಿಸಿದರು.
>
> ಗುರುಗಳು ಸಿಟ್ಟಿಗೆದ್ದು ಮೇಲ್ವಿಚಾರಕರನ್ನು ತರಾಟೆಗೆ ತೆಗೆದುಕೊಂಡು, ಒಳ್ಳೆ ಅಕ್ಕಿ ತಂದು ಊಟ ಬಡಿಸುವಂತೆ ತಾಕೀತು ಮಾಡಿದ್ದರು. ಈ ವಿಚಾರವನ್ನು ಈಗಲೂ ಗೊ.ರು.ಚ ಮೆಲುಕು ಹಾಕುತ್ತಾರೆ. ಹಿರಿಯ ಗುರುಗಳನ್ನು ಆರಾಧಿಸುತ್ತಾರೆ. ಅವರನ್ನು ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದು ನಮಗೆ ಸಂತೋಷ ತಂದಿದೆ ಎಂದು ಸ್ವಾಮೀಜಿ ಹೇಳಿದರು.

## ಸುಗ್ರೀವಾಜ್ಞೆ ತಿರಸ್ಕಾರ

### ಮೈಕ್ರೋ ಫೈನಾನ್ಸ್ ಕಂಪನಿ ಕಿರುಕುಳ ಹಾವಳಿ ತಡೆ ಸುಗ್ರೀವಾಜ್ಞೆ ತರ್ಕ ಸಮರ್ಥನೀಯವಲ್ಲ ಎಂದ ರಾಜ್ಯಪಾಲ ಗೆಹ್ಲೋಟ್

ಬೆಂಗಳೂರು, ಫೆ.7 - ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳ ಹಾವಳಿ ತಡೆಗೆ ಸರ್ಕಾರ ತರಲು ಉದ್ದೇಶಿಸಿರುವ ಸುಗ್ರೀವಾಜ್ಞೆಯಲ್ಲಿ ಅಪರಾಧಕ್ಕೆ ಶಿಕ್ಷೆ ಮತ್ತು ದಂಡ ಕಾಲಂ ತಿದ್ದುಪಡಿಯಲ್ಲಿ ಯಾವುದೇ ಸೂಕ್ತ ತರ್ಕ ಕಂಡುಬರುತ್ತಿಲ್ಲ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅದ್ಯಾದೇಶಕ್ಕೆ ಸಹಿ ಹಾಕದೇ ವಾಪಸ್ ಕಳುಹಿಸಿದ್ದಾರೆ.

ಸಾಲ ಪಡೆದವರ ರಕ್ಷಣೆಗೆ ಮಾತ್ರ ಗಮನ ಹರಿಸಲಾಗಿದೆ, ಸಹಜ ನ್ಯಾಯದಡಿ ಸಾಲ ಕೊಟ್ಟ ಸಂಸ್ಥೆಗಳ ರಕ್ಷಣೆ ವಿಷಯ ಕಾಣಿಸುತ್ತಿಲ್ಲ, ಮುಂದಿನ ದಿನಗಳಲ್ಲಿ ಈ ಮಸೂದೆ ಮಾರಕವಾಗುವ ಸಾಧ್ಯತೆ ಇದೆ.

ಸುಗ್ರೀವಾಜ್ಞೆಯಲ್ಲಿ ಸರ್ಕಾರ ಪ್ರಸ್ತಾಪಿಸಿರುವ ದಂಡ ಪ್ರಮಾಣ ಐದು ಲಕ್ಷ ರೂ. ಇದ್ದು,



ಮೈಕ್ರೊ ಫೈನಾನ್ಸ್ ಸಂಸ್ಥೆಗಳು ನೀಡುವ ಗರಿಷ್ಠ ಸಾಲ ಮಿತಿ 3 ಲಕ್ಷ ರೂ.ಗಳಾಗಿದೆ, ಇಂತಹ ಸಂದರ್ಭಗಳಲ್ಲಿ ಸರ್ಕಾರದ ತರ್ಕ ಸಮರ್ಥನೀಯವಲ್ಲ ಎಂಬ ಅಭಿಪ್ರಾಯವನ್ನು ರಾಜ್ಯಪಾಲರು ವ್ಯಕ್ತಪಡಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಎಸಗುವ ಅಪರಾಧಕ್ಕೆ 10 ವರ್ಷಗಳ ಶಿಕ್ಷೆ ಮತ್ತು 5 ಲಕ್ಷ ರೂ.ಗಳ ದಂಡ ವಿಪರೀತವಾಗಿದೆ, ಸಾಲ ಪಡೆಯುವವನಿಂದ ಯಾವುದೇ ದಾಖಲೆ ಪಡೆಯಬಾರದು ಎಂಬ ನಿಯಮ ಸರ್ಕಾರಿ ಸಂಸ್ಥೆಗಳು ಸಾಲ ನೀಡುವ ವೇಳೆಯಲ್ಲೂ ಅನುಸರಿಸಬೇಕೆಂಬ ಪರಿಸ್ಥಿತಿ ನಿರ್ಮಾಣ ಆಗಬಹುದು. ಪ್ರಾಮಾಣಿಕವಾಗಿ ಸಾಲ ಕೊಡುವವರು ಹಾಗೂ ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವವರಿಗೂ ಇದು ಸಮಸ್ಯೆ ಒಡ್ಡುವ ಸಾಧ್ಯತೆ ಇದೆ.

ಬಜೆಟ್ ಅಧಿವೇಶನದಲ್ಲಿ ಸಾಧಕ-ಬಾಧಕ ಚರ್ಚಿಸಿ, ಈಗಿರುವ ಲೇವಾದೇವಿ ಕಾನೂನುಗಳಡಿ ಪೊಲೀಸರು ಸೂಕ್ತ ಕ್ರಮಕೈಗೊಳ್ಳುತ್ತಿಲ್ಲ ಎಂಬ ಅಪವಾದವಿದೆ, ಇಂತಹ ಸಂದರ್ಭದಲ್ಲಿ ಕಿರುಕುಳ ತಡೆಗೆ ಮತ್ತೊಂದು ಕಾನೂನಿನ ಅಗತ್ಯತೆ ಕಾಣುತ್ತಿಲ್ಲ ಎಂಬ ಸ್ಪಷ್ಟ ನುಡಿಗಳೊಂದಿಗೆ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ಅಂಕಿತವಿಲ್ಲದೆ ವಾಪಸ್ ಕಳುಹಿಸಿದ್ದಾರೆ ಎನ್ನಲಾಗಿದೆ.

## ಮುಡಾ: ಸಿಬಿಐಗೆ ಹಸ್ತಾಂತರಿಸುವ ಅರ್ಜಿ ಹೈಕೋರ್ಟ್‌ನಲ್ಲಿ ತಿರಸ್ಕೃತ

ಬೆಂಗಳೂರು, ಫೆ. 7- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮುಖ್ಯಮಂತ್ರಿ ಕುಟುಂಬ ಪಡೆದ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಇಂದು ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರ ತನಿಖೆ ಅಸಮರ್ಪಕ ಎನ್ನುವುದಕ್ಕೆ ಕಾರಣಗಳಿಲ್ಲ, ಲೋಕಾಯುಕ್ತ ತನಿಖೆ ತಾರತಮ್ಯಪೂರಿತ ಎಂಬುದಕ್ಕೆ ಆಧಾರಗಳಿಲ್ಲ ಹಾಗೂ ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆಯಾಗಿದೆ ಎನ್ನುವ ಮೂಲಕ ಅರ್ಜಿಯನ್ನು ವಜಾ ಮಾಡಿದೆ.

ಹೈಕೋರ್ಟ್ ತೀರ್ಪಿನಿಂದ ತೀವ್ರ ಗೊಂದಲದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರಾಳತೆ ದೊರೆತಿದೆ.

ಲೋಕಾಯುಕ್ತ ಪೊಲೀಸರು ನಡೆಸಿದ ತನಿಖಾ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಲಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಮುಡಾ ಹಗರಣದಲ್ಲಿ 3 ಲಕ್ಷದ 26 ಸಾವಿರ ಮೊತ್ತದ ಜಮೀನು ಸ್ವಾಧೀನಕ್ಕೆ ಬದಲಿಗೆ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ 14 ದುಬಾರಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, (4ನೇ ಪುಟಕ್ಕೆ)

## ಯಡಿಯೂರಪ್ಪ ವಿರುದ್ಧದ ಮೊಕದ್ದಮೆ ರದ್ದತಿಗೆ ನಕಾರ



ಬೆಂಗಳೂರು, ಫೆ. 7- ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಮೊಕದ್ದಮೆ ರದ್ದತಿಗೆ ರಾಜ್ಯ ಹೈಕೋರ್ಟ್ ನಿರಾಕರಿಸಿದೆ.

ಆದರೆ, ಯಡಿಯೂರಪ್ಪ ಅವರಿಗೆ ನಿರೀಕ್ಷಣಾ ಜಾಮೀನು ನೀಡುವ ಮೂಲಕ ಬಂಧನದ ಭೀತಿಯಿಂದ ಪಾರು ಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ಆಲಿಸಿ, ಕಾಯ್ದಿರಿಸಿದ್ದ (2ನೇ ಪುಟಕ್ಕೆ)

## ಕೋವಿಡ್ ಅಡ್ಡ ಪರಿಣಾಮದಿಂದ ಸಾವು ಸಂಶೋಧನೆಗೆ ಮುಖ್ಯಮಂತ್ರಿ ಆದೇಶ



ಬೆಂಗಳೂರು, ಫೆ. 7- ಕೋವಿಡ್ ಅಥವಾ ಕೋವಿಡ್ ಲಸಿಕೆಯ ಅಡ್ಡ ಪರಿಣಾಮದಿಂದ ಹೃದಯಾಘಾತ, ಹೃದಯಸ್ತಂಭನ, ನರ ಸಂಬಂಧಿ ಮತ್ತಿತರೆ ಕಾರಣಗಳಿಂದಾಗಿ ಯುವಜನರ ಸಾವು ಕುರಿತು ಸಂಶೋಧನೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶ ಮಾಡಿದ್ದಾರೆ.

ಸಾವುಗಳು ಸಂಭವಿಸದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಮರ್ಪಕ ಸಂಶೋಧನೆ ನಡೆಸಲು ತಜ್ಞರ ಹಾಗೂ ವಿಜ್ಞಾನಿಗಳ ಸಮಿತಿ ರಚಿಸಿ ವರದಿ ಪಡೆದುಕೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಅವರಿಗೆ ಆದೇಶ ಮಾಡಿದ್ದಾರೆ. ವರದಿ ಪಡೆದ ನಂತರ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಕೋವಿಡ್ ನಂತರ ಯುವಜನರು ಹೃದಯ ಸಂಬಂಧಿ ಹಾಗೂ ನರ ರೋಗ ಕಾಯಿಲೆಗಳಿಂದ (2ನೇ ಪುಟಕ್ಕೆ)




## ದೇಶ ವಿರೋಧಿ ಭಾವನೆಗಳಿಗೆ ನ್ಯಾಯಾಂಗದ ಮಾರ್ಗ ಅಸ್ತ್ರವಾಗಿ ಬಳಕೆ : ಧನಕರ್ ಕಳವಳ

ಬೆಂಗಳೂರು, ಫೆ. 7 - ಇತ್ತೀಚಿನ ವರ್ಷಗಳಲ್ಲಿ ದೇಶ ವಿರೋಧಿ ಭಾವನೆಗಳಿಗೆ ನ್ಯಾಯಾಂಗದ ಮಾರ್ಗವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಬೇರೆ ಯಾವುದೇ ದೇಶದಲ್ಲಿ ಇಂತಹ ಪರಿಸ್ಥಿತಿ ಕಂಡುಬಂದಿಲ್ಲ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ.

ದೇಶದ ಚುನಾವಣಾ ಪ್ರಕ್ರಿಯೆ ಮೇಲೆ ಪ್ರಭಾವ ಬೀರುವ ಯತ್ನವೂ ನಡೆದಿದೆ ಎಂದವರು ಕಳವಳ ವ್ಯಕ್ತಪಡಿಸಿದ್ದಾರೆ.

ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನಲ್ಲಿ ಆಯೋಜಿಸಲಾಗಿರುವ ಕರ್ನಾಟಕ ವೈಭವ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

> **ರಾಣೆಬೆನ್ನೂರಿನಲ್ಲಿ 'ಕರ್ನಾಟಕ ವೈಭವ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವ' ಉದ್ಘಾಟಿಸಿದ ಉಪರಾಷ್ಟ್ರಪತಿ**

ವಿಭಜನಾತ್ಮಕ ಶಕ್ತಿಗಳು ಬೇರೆ ಬೇರೆ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಅವು ಹೊಸ ಮಾರ್ಗಗಳನ್ನು ಹುಡುಕಿಕೊಳ್ಳುತ್ತವೆ ಹಾಗೂ ಹೊಸ ವಿಷಯಗಳನ್ನು ಕಂಡುಕೊಳ್ಳುತ್ತವೆ. ಇಂತಹ ಶಕ್ತಿಗಳು ಈಗ ನ್ಯಾಯಾಂಗದ ಕಡೆ ತಿರುಗಿವೆ ಎಂದು ಧನಕರ್ ಹೇಳಿದರು.

ನಮ್ಮ ಸಂವಿಧಾನ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯಾಂಗದ ವ್ಯವಸ್ಥೆಯಲ್ಲಿ ಹಕ್ಕು ನೀಡಿದೆ. ಪ್ರತಿಯೊಬ್ಬ ವ್ಯಕ್ತಿ ನ್ಯಾಯಾಂಗದ ನೆರವು ಪಡೆಯಬಹುದು. ಆದರೆ, ಇತ್ತೀಚಿನ ವರ್ಷಗಳಲ್ಲಿ ದೇಶ ವಿರೋಧಿ ಭಾವನೆಗಳನ್ನು ಸೃಷ್ಟಿಸಲು ಹಣ ಬಳಸಲಾಗುತ್ತಿದೆ. ಸಾರ್ವಜನಿಕರಿಗೆ ನೀಡಲಾಗಿರುವ ನ್ಯಾಯಾಂಗ ಮಾರ್ಗವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಬೇರೆ ಯಾವುದೇ ದೇಶದಲ್ಲೂ ಈ ರೀತಿ ನಡೆಯುತ್ತಿಲ್ಲ ಎಂದು ಉಪರಾಷ್ಟ್ರಪತಿ ಹೇಳಿದರು.

ಈ ಶಕ್ತಿಗಳು ರಾಷ್ಟ್ರವಾದ ಹಾಗೂ ಪ್ರಾಂತಿಯವಾದದ ನಡುವೆ ಘರ್ಷಣೆ ಸೃಷ್ಟಿಸಲು ಪ್ರಯತ್ನ ನಡೆಸಿವೆ. ನಮ್ಮ (4ನೇ ಪುಟಕ್ಕೆ)

## ಬಡ್ಡಿ ದರ 0.25ರಷ್ಟು ಕಡಿತ

> **ರಿಸರ್ವ್ ಬ್ಯಾಂಕ್‌ನಿಂದ ಐದು ವರ್ಷಗಳಲ್ಲಿ ಮೊದಲ ಬಾರಿಗೆ ಬಡ್ಡಿ ದರ ಇಳಿಕೆ**

ಮುಂಬೈ, ಫೆ. 7 - ಐದು ವರ್ಷಗಳ ನಂತರ ಮೊದಲ ಬಾರಿಗೆ ರೆಪೋ ಬಡ್ಡಿ ದರವನ್ನು 25 ಮೂಲ ಅಂಕಗಳಷ್ಟು ಇಳಿಸಲು ರಿಸರ್ವ್ ಬ್ಯಾಂಕ್ ತೀರ್ಮಾನಿಸಿದೆ. ಇದರಿಂದಾಗಿ ಮನೆ ಸಾಲ, ವಾಹನ ಸಾಲ ಸೇರಿದಂತೆ ಹಲವು ಸಾಲಗಳ ಕಂತುಗಳ ಹೊರೆ ಇಳಿಕೆಯಾಗಲಿದೆ.

ಆರ್ಥಿಕತೆಗೆ ಉತ್ತೇಜನ ನೀಡುವ ಕ್ರಮವನ್ನು ಪ್ರಕಟಿಸಿರುವ ರಿಸರ್ವ್ ಬ್ಯಾಂಕ್ ನೂತನ ಗವರ್ನರ್ ಸಂಜಯ್ ಮಲ್ಹೋತ್ರ, ಮೂಲ ಬಡ್ಡಿ ದರವನ್ನು 6.25ಕ್ಕೆ ನಿಗದಿಪಡಿಸಲಾಗುವುದು ಎಂದು ಹೇಳಿದ್ದಾರೆ.

ಈ ಹಿಂದೆ ಫೆಬ್ರವರಿ 2023ರಲ್ಲಿ ಮೂಲ ಬಡ್ಡಿ ದರವನ್ನು ಶೇ. 6.5ಕ್ಕೆ ಹೆಚ್ಚಿಸಲಾಗಿತ್ತು. ಆನಂತರದಲ್ಲಿ ಬಡ್ಡಿ ದರವನ್ನು ಯಥಾ ಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿತ್ತು.

ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ (4ನೇ ಪುಟಕ್ಕೆ)

## ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ವರುಣ್ ಬೆಣ್ಣೆಹಳ್ಳಿ



ದಾವಣಗೆರೆ, ಫೆ.7 - ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ವರುಣ್ ಬೆಣ್ಣೆಹಳ್ಳಿ ಅತ್ಯಧಿಕ ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ.

ದಾವಣಗೆರೆ ಜಿಲ್ಲೆ ಸೇರಿದಂತೆ, ಯುವ ಕಾಂಗ್ರೆಸ್ ರಾಜ್ಯ ಘಟಕವಲ್ಲದೇ, ರಾಜ್ಯದ ಎಲ್ಲಾ ಜಿಲ್ಲೆಗಳ ಅಧ್ಯಕ್ಷರ ಸ್ಥಾನಗಳಿಗೆ ಕಳೆದ 2024, ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆದಿತ್ತಾದರೂ, ವಿವಿಧ ಕಾರಣಗಳಿಂದ ಫಲಿತಾಂಶ ಇಂದು ಸಂಜೆ ಆನ್‌ಲೈನ್ ಮೂಲಕ ಪ್ರಕಟಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಯುವ ಕಾಂಗ್ರೆಸ್‌ನ 42 ಸಾವಿರ ಮತದಾರರಿದ್ದು, ವರುಣ್ ಬೆಣ್ಣೆಹಳ್ಳಿ ಅವರು 1,719 (5ನೇ ಪುಟಕ್ಕೆ)

## ಬ್ಯಾಂಕ್ ಹಾಗೂ ಬ್ಯಾಂಕೇತರ ಸಂಸ್ಥೆಗಳಿಗೆ ಪ್ರತ್ಯೇಕ ಡೊಮೇನ್

ಮುಂಬೈ, ಫೆ. 7 - ಸೈಬರ್ ಸುರಕ್ಷತಾ ಬೆದರಿಕೆ ಎದುರಿಸುವ ಸಲುವಾಗಿ ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಪ್ರತ್ಯೇಕ ಹೆಸರು ಕಲ್ಪಿಸಲು ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ. ಬ್ಯಾಂಕುಗಳ ವೆಬ್ ತಾಣಗಳಿಗೆ ಇನ್ನು ಮುಂದೆ bank.in ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ fin.in ಎಂಬ ಡೊಮೇನ್ ಹೆಸರು ನೀಡಲಾಗುವುದು.

ರಿಸರ್ವ್ ಬ್ಯಾಂಕ್‌ನ ದ್ವೈಮಾಸಿಕ ಹಣಕಾಸು ನೀತಿ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಬರುವ ಏಪ್ರಿಲ್ (4ನೇ ಪುಟಕ್ಕೆ)

## ಸರಳ ಮದುವೆಯಾದ ಅದಾನಿ ಪುತ್ರ

### ಸಾಮಾಜಿಕ ಉದ್ದೇಶಕ್ಕೆ ಉದ್ಯಮಿಯಿಂದ 10,000 ಕೋಟಿ ರೂ.ಗಳ ದಾನ



ಆಹಮದಾಬಾದ್, ಫೆ. 7 - ಉದ್ಯಮಿ ಗೌತಮ್ ಅದಾನಿ ಅವರ ಕಿರಿಯ ಮಗ ಶುಕ್ರವಾರ ದಿವಾ ಷಾ ಅವರ ಜೊತೆ ಸರಳ ಸಂಪ್ರದಾಯವಾಗಿ ಮದುವೆಯಾಗಿದ್ದಾರೆ. ಕುಟುಂಬದ ಸದಸ್ಯರು ಹಾಗೂ ನಿಕಟ ಸ್ನೇಹಿತರನ್ನು ಮಾತ್ರ ಮದುವೆಗೆ ಆಹ್ವಾನಿಸಲಾಗಿತ್ತು.

ಮಗನ ಮದುವೆಯನ್ನು ಸರಳವಾಗಿ ನೆರವೇರಿಸಿರುವ ಅದಾನಿ, ಇದೇ ವೇಳೆ ಹಲವಾರು ಸಾಮಾಜಿಕ ಉದ್ದೇಶಗಳಿಗಾಗಿ 10,000 ಕೋಟಿ ರೂ.ಗಳನ್ನು ದಾನ ಮಾಡಿದ್ದಾರೆ.

ಜೈನ ಸಂಪ್ರದಾಯದ ಅನ್ವಯ ಇಲ್ಲಿನ ಶಾಂತಿ ಗ್ರಾಮದಲ್ಲಿ ಮದುವೆ ಆಯೋಜಿಸಲಾಗಿತ್ತು. ಕುಟುಂಬದ ಸದಸ್ಯರು ಹಾಗೂ ಸ್ನೇಹಿತರು ಮಾತ್ರ ಸಮಾರಂಭದಲ್ಲಿ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸಮಾಜದ ಗಣ್ಯರು ಇಲ್ಲವೇ ತಾರೆಯರನ್ನು ಮದುವೆಗೆ ಆಹ್ವಾನಿಸಿರಲಿಲ್ಲ ಎಂದು ಮೂಲಗಳು ಹೇಳಿವೆ.

ಅದಾನಿ ತಮ್ಮ ಉದ್ಯಮದ ಉದ್ಯೋಗಿಗಳಿಗಾಗಿ ಶನಿವಾರ ಔತಣಕೂಟ ಆಯೋಜಿಸಿದ್ದಾರೆ.

ಈ ಬಗ್ಗೆ ಟ್ವಿಟರ್ ಮೂಲಕ ಹೇಳಿಕೆ ನೀಡಿರುವ ಅದಾನಿ, ದೇವರ ಆಶೀರ್ವಾದದೊಂದಿಗೆ ಜೀತ್ ಹಾಗೂ ದಿವಾ ವೈವಾಹಿಕ ಬಂಧನಕ್ಕೆ ಒಳಗಾಗಿದ್ದಾರೆ. ನಿಕಟವರ್ತಿಗಳ ಜೊತೆಗೆ ಪುಟ್ಟ ಸಮಾರಂಭ ಆಯೋಜಿಸಲಾಗಿತ್ತು. ಎಲ್ಲಾ ಹಿತೈಷಿಗಳು ಬಯಸಿದ್ದರೂ ಸಹ ಅವರಿಗೆ ಆಹ್ವಾನ ನೀಡಲು ಸಾಧ್ಯವಾಗಿಲ್ಲ. ಇದಕ್ಕಾಗಿ ವಿಷಾದಿಸುತ್ತೇನೆ ಎಂದು ಹೇಳಿದ್ದಾರೆ. (4ನೇ ಪುಟಕ್ಕೆ)

## ಹೆಣ್ಣುಮಕ್ಕಳ ಪರ ಧ್ವನಿಯಾಗಿದ್ದ ಉಮಾ ವೀರಭದ್ರಪ್ಪ ವಿಧಿವಶ



ದಾವಣಗೆರೆ, ಫೆ.7- ಶೋಷಣೆಗೊಳಗಾದ ಹೆಣ್ಣು ಮಕ್ಕಳ ಪರ ಧ್ವನಿಯಾಗಿದ್ದ ಸಾಮಾಜಿಕ ಸೇವಾ ಕಾರ್ಯಕರ್ತರಾದ ಶ್ರೀಮತಿ ಉಮಾ ವೀರಭದ್ರಪ್ಪ ಅವರು ನಿನ್ನೆ ರಾತ್ರಿ 11.30ಕ್ಕೆ ನಿಧನರಾದರು.

ವಯೋಸಹಜತೆಯಿಂದ ಬಳಲುತ್ತಿದ್ದ ಉಮಾ ವೀರಭದ್ರಪ್ಪ ಅವರು ಬೆಂಗಳೂರಿನಲ್ಲಿರುವ ತಮ್ಮ ಪುತ್ರ - ವೈದ್ಯ ಡಾ. ಭರತ್ ಭೂಷಣ್ ಅವರ ನಿವಾಸದಲ್ಲಿ ಕಳೆದ 2 - 3 ತಿಂಗಳಿಂದ ವೈದ್ಯರ ಆರೈಕೆಯಲ್ಲಿದ್ದರು.

ಮೃತರಿಗೆ ಸುಮಾರು 84 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು -ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಬೆಂಗಳೂರಿನಲ್ಲಿ ಇಂದು ಬೆಳಿಗ್ಗೆ ನೆರವೇರಿತು.

**ಸಂಕ್ಷಿಪ್ತ ಪರಿಚಯ :** ಮೂಲತಃ ಮೈಸೂರಿನವರಾದ ಉಮಾ, ಜಗಳೂರಿನ ಜೆ.ಎನ್. ವೀರಭದ್ರಪ್ಪ ಅವರನ್ನು ಮದುವೆಯಾಗಿ, ನಂತರದ ದಿನಗಳಲ್ಲಿ ದಾವಣಗೆರೆಯಲ್ಲಿ ವಾಸವಾಗಿದ್ದರು.

1980 - 1990ರ ದಶಕಗಳಲ್ಲಿ ಮಹಿಳೆಯರ ಮೇಲಿನ ಶೋಷಣೆ, ವರದಕ್ಷಿಣೆ ಕಿರುಕುಳ, ಮಹಿಳೆಯರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾದ ಸಂದರ್ಭದಲ್ಲಿ ಮಹಿಳಾ (2ನೇ ಪುಟಕ್ಕೆ)


॥ ಶ್ರೀ ವೀತರಾಗಾಯ ನಮಃ ॥ ॥ ಶ್ರೀ ಪದ್ಮಾವತಿದೇವಿ ಪ್ರಸನ್ನ॥

ಇಪ್ಪತ್ತೊಂದನೇ ವರ್ಷದ ಚಿರಸ್ಮರಣೆ



ದಿ. ಶ್ರೀ ಬೇತೂರು ಕುಬೇರಪ್ಪ

ಜನನ: 14-05-1933 - ನಿಧನ: 08-02-2004

ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತು ವರ್ಷಗಳು ಕಳೆದವು.
ನಿಮ್ಮ ಇರುವಿಕೆ ನಮ್ಮ ಹೃದಯದ ಬಡಿತವಾಗಿ ಸದಾ ನಮ್ಮೊಂದಿಗೆ ಚಿರವಾಗಿರುತ್ತದೆ...
ನಿಮ್ಮ ಆಶೀರ್ವಾದ ಎಂದಿಗೂ ನಮ್ಮೊಂದಿಗೆ ಜೀವಂತವಾಗಿರಲಿ....
ಮಗಳು: ಶ್ರೀಮತಿ ಬಿ.ಕೆ. ಅರ್ಚನಾ, ಅಳಿಯ : ಶ್ರೀ ಡಿ. ಮಹಾವೀರ್
ಪ್ರೀತಿಯ ಮೊಮ್ಮಗಳು : ಕು॥ ಎಂ. ಲಕ್ಷ್ಮಿ

ಪದ್ಮಾಂಬ (ಕುಬೇರಪ್ಪ) ಕಾಂಪ್ಲೆಕ್ಸ್, ಮಹಾವೀರ ಭವನ, ದಾವಣಗೆರೆ.
ಬೇತೂರು ಕುಟುಂಬ ವರ್ಗದವರು
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.

# ಜಗಳೂರು ತಾ. ಹುಚ್ಚಂಗಿಪುರ ಸರ್ಕಾರಿ ಹೈಟೆಕ್ ಶಾಲೆಗೆ 25 ಲಕ್ಷ ರೂ. ವಿಶೇಷ ಅನುದಾನ

ಜಗಳೂರು, ಫೆ. 7 - ತಾಲ್ಲೂಕಿನ ಹುಚ್ಚಂಗಿಪುರ ಗ್ರಾಮದ ಹೈಟೆಕ್ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ ಆರಂಭಿಸಿ, ಮೇಲ್ದರ್ಜೆಗೇರಿಸಿ ಶಾಲೆ ಅಭಿವೃದ್ಧಿಗೆ 25 ಲಕ್ಷ ಅನುದಾನ ನೀಡುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವ ಮಧು ಬಂಗಾರಪ್ಪ ಘೋಷಿಸಿದರು.

ಶುಕ್ರವಾರ ತಾಲ್ಲೂಕಿನ ಹುಚ್ಚಂಗಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮತ್ತು ಸಂಸದ, ಶಾಸಕರುಗಳ ಪ್ರದೇಶಾಭಿವೃದ್ಧಿ ನಿಧಿಯಿಂದ ರೂ. 3.25 ಕೋಟಿ ರೂ. ವೆಚ್ಚದಲ್ಲಿ ನಮ್ಮ ಶಾಲೆ, ನಮ್ಮ ಕೊಡುಗೆ ಯಡಿ ನಿರ್ಮಿಸಲಾದ ನೂತನ ಹೈಟೆಕ್ ಶಾಲಾ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯವ್ಯಾಪಿ 76000 ಶಾಲೆಗಳು, 1.8 ಕೋಟಿ ಮಕ್ಕಳಲ್ಲಿ 57 ಲಕ್ಷ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಶಾಲಾ ಕಟ್ಟಡ, ಶೌಚಾಲಯ, ಶಿಕ್ಷಕರ, ಕೊರತೆಯಿವೆ. ಶೇ. 37 ರಷ್ಟು ಸರ್ಕಾರಿ ನೌಕರರನ್ನೊಳಗೊಂಡ ಅತಿದೊಡ್ಡ ಇಲಾಖೆ ಶಿಕ್ಷಣ ಇಲಾಖೆಯಾಗಿದೆ.ರಾಜ್ಯದಲ್ಲಿ ಅನುದಾನಿತ ಮತ್ತು ಸರ್ಕಾರಿ ಶಾಲೆಗಳಲ್ಲಿ ಒಟ್ಟು 50 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು. ಇದೀಗ 13500 ಶಿಕ್ಷಕರ ಹುದ್ದೆ ಭರ್ತಿಗೆ ಆದೇಶ ಹೊರಡಿಸಲಾಗಿದೆ ಎಂದರು.



ಕಲ್ಯಾಣ ಕರ್ನಾಟಕವನ್ನೊಳಗೊಂಡಂತೆ ಹಂತ ಹಂತವಾಗಿ 25000 ಶಿಕ್ಷಕರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಕಂಪನಿಗಳ ಸಿಎಸ್ ಆರ್, ಅಜೀಂ ಪ್ರೇಮ್ ಜಿ ಫಂಡ್‌ಗಳ ಸಹಭಾಗಿತ್ವದಿಂದ ಪ್ರತಿವರ್ಷ ಹತ್ತಾರು ಸಾವಿರ ಕೋಟಿ ಹಣ ಇಲಾಖೆಯಿಂದ ಖರ್ಚು ಭರಿಸಿ ಮೂಲಸೌಕರ್ಯ ಹಾಗೂ ಪೌಷ್ಠಿಕಾಂಶ ಪೂರೈಕೆಗಾಗಿ ನೀಡುವ ಮೊಟ್ಟೆಗಳನ್ನು ವಾರಪೂರ್ತಿ ಮಕ್ಕಳಿಗೆ ಶಿಕ್ಷಕರು ವಿತರಿಸಬೇಕು. ಪೋಷಕರು ಮಕ್ಕಳ ಕಡ್ಡಾಯ ಹಾಜರಾತಿಗೆ ಕೈಜೋಡಿಸಿ ಸರ್ಕಾರದ ಸವಲತ್ತುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರನ್ನು ಸ್ಮರಿಸಿದ ಪುತ್ರ ಸಚಿವ ಮಧು ಬಂಗಾರಪ್ಪ, ನನ್ನ ತಂದೆ ಅವರ ಆಡಳಿತಾವಧಿಯಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಗ್ರಾಮೀಣ ಕೃಪಾಂಕ, ಆರಾಧನಾ, ರೈತರ ನೀರಾವರಿಗಾಗಿ ನಿರಂತರ ವಿದ್ಯುತ್ ಪೂರೈಕೆ, ಶಿಕ್ಷಣ ವಂಚಿತರಾಗದಂತೆ ಶಾಲೆಗೆ ಸೇರುವ ಮಗುವಿಗೆ ಪ್ರತಿದಿನ ರೂ. 1 ರೂ ಪ್ರೋತ್ಸಾಹ ಧನ ಸೇರಿದಂತೆ ನನ್ನ ತಂದೆಯವರ ಜನಪರ ಯೋಜನೆಗಳು ನನಗೆ ಸ್ಪೂರ್ತಿ,ಕಣ್ಣಿಗೆ ಕಾಣುವ ದೇವರುಗಳಾದ ಮಕ್ಕಳ ಶಿಕ್ಷಣ ಸೇವೆ ನನ್ನ ಧ್ಯೇಯವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲಾ ಕಟ್ಟಡ ಸುಸಜ್ಜಿತವಾಗಿದ್ದು. ಕಂಪ್ಯೂಟರ್ ಲ್ಯಾಬ್, ಕ್ರೀಡಾಂಗಣ,

### ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ಸ್ಮಾರ್ಟ್ ಕ್ಲಾಸ್, ಹೈಟೆಕ್ ಪರಿಕರಗಳಿಂದ ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ನನ್ನ ಅಮ್ಮನ ಕನಸು ಸಾಕಾರಗೊಳಿಸುವ ಹಿನ್ನೆಲೆಯಲ್ಲಿ ನಮ್ಮ ಊರಿನ ನಾನು ಓದಿದ ಸರ್ಕಾರಿ ಶಾಲೆಯನ್ನು ಮೊದಲ ಆದ್ಯತೆಯಲ್ಲಿ ಅಭಿವೃದ್ದಿಪಡಿಸಿರುವೆ. ಮುಂಬರುವ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಾಣ, ಕುಡಿಯಲು ತುಂಗಾ ನೀರು ಬರಬೇಕಿದೆ. ರಾಜ್ಯದ ಶಿಕ್ಷಣ ಸಚಿವರು ರೂ. 25 ಲಕ್ಷ ಅನುದಾನವನ್ನು ಶಾಲೆ ಮೂಲಸೌಕರ್ಯ ಅಭಿವೃದ್ದಿಗೆ ಒದಗಿಸಬೇಕು.ಜೂನ್ ನಿಂದ 8ನೇ ತರಗತಿ ಆರಂಭಿಸಲು ಆದೇಶ ಹೊರಡಿಸಬೇಕು ಎಂದು ಮನವಿ ಮಾಡಿದರು. ಕಾಫಿನಾಡಿಗೆ ಗುಳೆಹೋಗುವ ಬಡಕೂಲಿ ಶ್ರಮಿಕ ವರ್ಗ ನನ್ನ ಗ್ರಾಮದ ಜನತೆಗೆ ಶಿಕ್ಷಣ, ಆರೋಗ್ಯ, ಸಾರಿಗೆ ಸೌಕರ್ಯ ಅಗತ್ಯವಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರೊ. ಸಂಕನೂರು ಮಾತನಾಡಿ, ಪೋಷಕರು ಮಕ್ಕಳಿಗೆ ಶಾಶ್ವತವಾಗಿ ಉಳಿಯುವ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, 400 ಕೋಟಿ ರೂ. ವೆಚ್ಚದಲ್ಲಿ ತ್ವರಿತಗತಿಯಲ್ಲಿ ಕಾಮಗಾರಿ ಸಾಗುತ್ತಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಹುಚ್ಚಂಗಿಪುರಕ್ಕೆ ಶುದ್ಧ ಕುಡಿಯುವ ನೀರು ಪೂರೈಕೆಯಾಗಲಿದೆ. ತಾಲೂಕಿನಲ್ಲಿ ಬಾಲಕೀಯರ ಪದವಿಪೂರ್ವ ಕಾಲೇಜುಗಳ ಅಗತ್ಯವಿದ್ದು ಮಂಜೂರು ಮಾಡಬೇಕು. ಶಿಥಿಲಾವಾಸ್ಥೆಯಲ್ಲಿರುವ ಶಾಲಾಕಟ್ಟಡಗಳ ದುರಸ್ತಿಗೆ ಸಚಿವರು ಅನುದಾನ ಒದಗಿಸಬೇಕೆಂದು ಮನವಿ ಮಾಡಿದರು.

ಗ್ರಾಮಸ್ಥರು ಮನೆಯ ಮುಂದೆ ಮಕ್ಕಳಿಂದ ಮಲವಿಸರ್ಜನೆ ಮಾಡಿಸದೆ. ನೆರೆಹೊರೆಯಲ್ಲಿ ಸ್ವಚ್ಛತೆ ಕಾಪಾಡಬೇಕು. ಪ್ಲಾಸ್ಟಿಕ್‌ಗಳನ್ನು ನಿಗದಿತ ಜಾಗದಲ್ಲಿ ವಿಲೇವಾರಿಗೊಳಿಸಬೇಕು. ಶ್ರಮದ ಹಣವನ್ನು ಆಸ್ಪತ್ರೆಗೆ ಭರಿಸದೆ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ತಿಳಿಸಿದರು.

ಸಂದರ್ಭದಲ್ಲಿ ಬ್ರಾಹ್ಮಣ ಅಭಿವೃದ್ದಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ವಿಧಾನ ಪರಿಷತ್ ಸದಸ್ಯ ಚಿದಾನಂದಗೌಡ, ಕೆ.ಎಸ್. ನವೀನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಜಿ.ಪಂ ಮಾಜಿ ಸದಸ್ಯ ಕೆ.ಪಿ.ಪಾಲಯ್ಯ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಎಲ್ ತಿಪ್ಪೇಸ್ವಾಮಿ,ಗ್ರಾ.ಪಂ ಅಧ್ಯಕ್ಷೆ ಗುತ್ಯಮ್ಮ, ಜಿ.ಪಂ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಶಿಕ್ಷಣ ಇಲಾಖೆ ಉಪನಿರ್ದೇಶಕ ಕೊಟ್ರೇಶ್, ಪಿಯು ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಡಯಟ್ ಪ್ರಾಂಶುಪಾಲರಾದ ಗೀತಮ್ಮ, ಎಸ್ ಡಿ ಎಂಸಿ ಅಧ್ಯಕ್ಷ ರುದ್ರೇಶ್, ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ,ತಾ.ಪಂ ಇಓ ಕೆಂಚಪ್ಪ,ಬಿಇಓ ಹಾಲಮೂರ್ತಿ ಇದ್ದರು.

# ಉಕ್ಕಡಗಾತ್ರಿ - ಮಲೇಬೆನ್ನೂರು ಬಸ್ ಸಂಚಾರಕ್ಕೆ ಶಾಸಕ ಹರೀಶ್ ಚಾಲನೆ



ಮಲೇಬೆನ್ನೂರು, ಫೆ.7- ಸರ್ಕಾರಿ ಬಸ್ ಸೌಲಭ್ಯ ಈ ಭಾಗದ ಜನರ ಬಹು ದಿನಗಳ ಬೇಡಿಕೆಯಾಗಿತ್ತು. ಹೋಬಳಿ ಕೇಂದ್ರವಾದ ಮಲೇಬೆನ್ನೂರಿಗೆ ಜನಸಾಮಾನ್ಯರು ಒಂದಿಲ್ಲೊಂದು ಕೆಲಸ ಕಾರ್ಯಗಳಿಗೆ ಹೋಗಲೇಬೇಕಾದ ಅನಿವಾರ್ಯತೆ ಇದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಅವರು ನಂದಿಗುಡಿಯಲ್ಲಿ ಉಕ್ಕಡಗಾತ್ರಿಯಿಂದ ನಂದಿಗುಡಿ, ಗೋವಿನಹಾಳ್, ಕೊಕ್ಕನೂರು, ಜಿ. ಬೇವಿನಹಳ್ಳಿ ಮಾರ್ಗವಾಗಿ ಮಲೇಬೆನ್ನೂರಿಗೆ ಮತ್ತೆ ಅದೇ ಮಾರ್ಗದಲ್ಲಿ ವಾಪಾಸ್ ಉಕ್ಕಡಗಾತ್ರಿಗೆ ತೆರಳುವ ಕೆಎಸ್‌ಆರ್‌ಟಿಸಿ ನೂತನ ಬಸ್ ಮಾರ್ಗಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಬಸ್ ಸೌಲಭ್ಯದಿಂದ ಜನಸಾಮಾನ್ಯರಿಗೆ ಅನುಕೂಲವಾಗಲಿದೆ ಎಂದು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ತಿಳಿಸಿದರು.

ವಾಸನ, ಕಡರನಾಯ್ಕನಹಳ್ಳಿ, ಹೊಳೆಸಿರಿಗೆರೆ, ಭಾನುವಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಹೋಬಳಿ ಕೇಂದ್ರವಾದ ಮಲೇಬೆನ್ನೂರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಎಕ್ಕೆಗೊಂದಿ ಬಳಿ ಶಿವಮೊಗ್ಗ ಕಡೆಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲುಗಡೆ ಮಾಡುವ ವ್ಯವಸ್ಥೆ ಮಾಡಬೇಕು. ಮಣಿಪಾಲ, ಮಂಗಳೂರು, ಬೆಂಗಳೂರು ಮುಂತಾದ ಕಡೆಗಳಿಗೆ ರೋಗಿಗಳು ಪ್ರಯಾಣಿಸಲು ಹರಿಹರಕ್ಕೆ ಹೋಗಿ ಬಸ್ ಹತ್ತಬೇಕಾದ ಪರಿಸ್ಥಿತಿ ಇದೆ. ರಾತ್ರಿ ಪೂರ್ತಿ ಹರಿಹರದ ಬಸ್ ಸ್ಟ್ಯಾಂಡ್ ನಲ್ಲಿ ಕಾಲಕಳೆದು ಬೆಳಿಗ್ಗೆ ಊರಿಗೆ ಬರಬೇಕಾಗಿದೆ. ಇಂತಹ ನಿಕೃಷ್ಟ ಪರಿಸ್ಥಿತಿಯನ್ನು ಪರಿಹರಿಸುವಂತೆ ಜನರು ಶಾಸಕ ಹರೀಶ್ ಅವರನ್ನು ಒತ್ತಾಯಿಸಿದರು. ಈ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿ ಶೀಘ್ರದಲ್ಲಿ ಸಮಸ್ಯೆಗೆ ಪರಿಹಾರ ನೀಡುವುದಾಗಿ ಶಾಸಕರು ಭರವಸೆ ನೀಡಿದರು.

ತಾಲ್ಲೂಕು ಗ್ರಾಮಾಂತರ ಬಿಜೆಪಿ ಕಾರ್ಯದರ್ಶಿ ಹುಗ್ಗಿ ಮಹಾಂತೇಶ್, ಉಕ್ಕಡಗಾತ್ರಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಚಂದ್ರೇಗೌಡ, ಸದಸ್ಯ ಕೆಂಚವೀರಯ್ಯ, ಶ್ರೀಕಾಂತ್, ಕಡರನಾಯ್ಕನಹಳ್ಳಿ ಮಂಜಣ್ಣ, ಅರುಣ್, ಸಿದ್ದಯ್ಯ, ಹಾಲಸ್ವಾಮಿ ಮತ್ತಿತರರು ಈ ವೇಳೆ ಇದ್ದರು.

## ಮಹಾ ಕುಂಭ : ಸಂಗಮದಲ್ಲಿ 40 ಕೋಟಿಗೂ ಹೆಚ್ಚು ಯಾತ್ರಿಗಳಿಂದ ಪವಿತ್ರ ಸ್ನಾನ

ಮಹಾಕುಂಭ ನಗರ, ಫೆ. 7 - ಮಹಾಕುಂಭಮೇಳದ ವೇಳೆ ಸಂಗಮದಲ್ಲಿ ಇದುವರೆಗೂ 40 ಕೋಟಿಗೂ ಹೆಚ್ಚು ಜನರು ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ. ಶುಕ್ರವಾರದಂದು ಸಂಗಮದಲ್ಲಿ 48 ಲಕ್ಷ ಯಾತ್ರಿಗಳು ಪವಿತ್ರ ಸ್ನಾನ ಮಾಡಿದ್ದಾರೆ. ಫೆಬ್ರವರಿ 26ರಂದು ಮಹಾಕುಂಭಮೇಳ ಪೂರ್ಣಗೊಳ್ಳಲಿದೆ.

## ಶ್ರೀ ಹರಿಹರೇಶ್ವರ ದೇವಾಲಯದಲ್ಲಿ ಅಗ್ನಿಹೋತ್ರ, ಸೂರ್ಯ ನಮಸ್ಕಾರ

ಹರಿಹರ, ಫೆ. 7- ರಥಸಪ್ತಮಿ ಪ್ರಯುಕ್ತ ಶ್ರೀ ಹರಿಹರೇಶ್ವರ ದೇವಾಲಯದ ಆವರಣದಲ್ಲಿ ನಾಡಿದ್ದು ದಿನಾಂಕ 9ರಂದು ಬೆಳಿಗ್ಗೆ 5ರಿಂದ 8ರವರೆಗೆ ಅಗ್ನಿಹೋತ್ರ ಮತ್ತು 108 ಬಾರಿ ಸೂರ್ಯ ನಮಸ್ಕಾರ ಕಾರ್ಯಕ್ರಮ ನಡೆಯಲಿದೆ.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ, ಶ್ರೀ ಯೋಗ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ ತುಮಕೂರು ಮತ್ತು ಮೈಸೂರು ಹಾಗೂ ವೇದಾವತಿ ವಲಯ ದಾವಣಗೆರೆ ಹಾಗೂ ಹರಿಹರ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 9901648868, 7022300263.

# ಹೆಣ್ಣುಮಕ್ಕಳ ಧ್ವನಿಯಾಗಿದ್ದ ಉಮಾ ವೀರಭದ್ರಪ್ಪ ವಿಧಿವಶ

**(1ನೇ ಪುಟದಿಂದ)** ಸಂಘಟನೆಗಳನ್ನು ಹುಟ್ಟು ಹಾಕಿದ್ದ ಉಮಾ, ಆ ಸಂಘಟನೆಗಳ ಮೂಲಕ ಬೀದಿಗಿಳಿದು ಹೋರಾಟ ಮಾಡುವುದರೊಂದಿಗೆ ಶೋಷಣೆಗೊಳಗಾದ ಮಹಿಳೆಯರಿಗೆ ನ್ಯಾಯ ಒದಗಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದರು.

ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ದಿ. ಶ್ರೀಮತಿ ವಿಮಲಾ ದಾಸ್ ಮತ್ತು ಇತರರೊಂದಿಗೆ ಸೇರಿ ಜಾಗೃತ ಮಹಿಳಾ ಸಂಘವನ್ನು ಸ್ಥಾಪಿಸಿದ್ದ ಉಮಾ ವೀರಭದ್ರಪ್ಪ, ಈ ಸಂಘದ ಮುಖವಾಣಿಯಲ್ಲಿ ಮಹಿಳೆಯರನ್ನು ಜಾಗೃತಿಗೊಳಿಸುವ ಕೆಲಸ ಮಾಡುತ್ತಿದ್ದರು. ವಿಮಲಾ ದಾಸ್ ಕಾಲವಾದ ನಂತರ ಆ ಸಂಘದ ಅಧ್ಯಕ್ಷರಾಗಿದ್ದ ಉಮಾ, ಇಂದಿಗೂ ಜಾಗೃತ ಮಹಿಳಾ ಸಂಘದಡಿಯಲ್ಲಿ ಶೋಷಿತ ಮಹಿಳೆಯರಿಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತಲೇ ಬಂದಿದ್ದರು. ಮಹಿಳೆಯರಿಗೆ ಸ್ವ-ಉದ್ಯೋಗ ಮಾಡಲು ಅನುಕೂಲವಾಗುವಂತೆ ಸಹಾಯ - ಸಹಕಾರ ಮಾಡುತ್ತಿದ್ದರು.

ತಮ್ಮದೇ ಆದ ದುರ್ಗಾದೇವಿ ಮಹಿಳಾ ಮಂಡಳಿಯನ್ನು ಸ್ಥಾಪಿಸಿ ಆ ಸಂಘದ ಮೂಲಕ, ಅಮೆರಿಕದಲ್ಲಿರುವ ತಮ್ಮ ಸಹೋದರ ಡಾ. ನಾಗರಾಜ ಮೂರ್ತಿ ಮತ್ತು ಸಿ.ಜಿ. ಆಸ್ಪತ್ರೆ, ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಉಚಿತ ಕಣ್ಣಿನ ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರವನ್ನು ನಡೆಸುತ್ತಿದ್ದರು. ಸುಮಾರು 50 ಸಾವಿರಕ್ಕೂ ಹೆಚ್ಚು ಜನರು ಈ ಶಿಬಿರಗಳ ಸದುಪಯೋಗ ಪಡೆದುಕೊಂಡಿದ್ದು, ಇದು ಅವರ ಸಮಾಜ ಸೇವೆಗೆ ಹಿಡಿದ ಕೈಗನ್ನಡಿ.

ತಮ್ಮ ಪತಿ ಜೆ.ಎನ್. ವೀರಭದ್ರಪ್ಪ ಅವರ ಜೊತೆ ದಾವಣಗೆರೆ ಜಿಲ್ಲೆ ಮಾತ್ರವಲ್ಲದೇ, ನೆರೆ ಜಿಲ್ಲೆಗಳಲ್ಲೂ ಸಂಚರಿಸಿ ನೂರಾರು ಉಚಿತ ಕಣ್ಣಿನ ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರಗಳನ್ನು ನಡೆಸುತ್ತಿದ್ದರು. ಅನೇಕರಿಂದ ನೇತ್ರಗಳನ್ನು ಪಡೆದು, ಅಂಧರಿಗೆ ಬೆಳಕು ನೀಡುವ ಕೆಲಸವನ್ನೂ ಅವರ ಮಾಡುತ್ತಿದ್ದರು. ಪತಿ ವೀರಭದ್ರಪ್ಪ ಕಾಲವಾದ ಮತ್ತು ತಮ್ಮ ವಯೋಸಹಜತೆಯಿಂದಾಗಿ ಶಿಬಿರ ನಡೆಸುವುದನ್ನು ಕೈಬಿಟ್ಟಿದ್ದರು.

ಜಾಗೃತ ಮಹಿಳಾ ಸಂಘದ ಜೊತೆ - ಜೊತೆಗೆ ಅಕ್ಕಮಹಾದೇವಿ ಮಹಿಳಾ ಸಮಾಜ, ಮಹಿಳಾ ಸಮಾಜ, ವನಿತಾ ಸಮಾಜ, ಅಖಿಲ ಭಾರತ ವೀರಶೈವ ಮಹಾಸಭಾದ ಮಹಿಳಾ ಘಟಕ, ಗಾಣಿಗರ ಮಹಿಳಾ ಸಮಾಜಗಳಲ್ಲದೇ, ಸ್ಕೌಟ್ಸ್ ಮತ್ತು ಗೈಡ್ಸ್ ಸೇರಿದಂತೆ, ಅನೇಕ ಸಾಮಾಜಿಕ ಸಂಘ - ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿದ್ದರು.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ನಿರ್ದೇಶಕರಾಗಿಯೂ ಉಮಾ ಸೇವೆ ಸಲ್ಲಿಸುತ್ತಿದ್ದರು. ಕಾಂಗ್ರೆಸ್ ಪಕ್ಷದ ರಾಜ್ಯ ಮಹಿಳಾ ಘಟಕದ ಕಾರ್ಯದರ್ಶಿಯಾಗುವುದರ ಮೂಲಕ ರಾಜಕೀಯ ಪಕ್ಷದಲ್ಲೂ ತಮ್ಮನ್ನು ಗುರುತಿಸಿಕೊಂಡಿದ್ದರು.

ಉಮಾ ವೀರಭದ್ರಪ್ಪ ಅವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಮಹಿಳಾ ಸಾಧಕರಿಗೆ ಪ್ರತಿ ವರ್ಷ ಕೊಡಮಾಡುವ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಲಯನ್ಸ್, ರೋಟರಿ ಸೇರಿದಂತೆ, ಹಲವಾರು ಸಾಮಾಜಿಕ ಸಂಸ್ಥೆಗಳು ಉಮಾ ಅವರಿಗೆ ಪುರಸ್ಕಾರ ನೀಡಿ ಸನ್ಮಾನಿಸಿದ್ದವು.

ಶೋಕ : ಉಮಾ ವೀರಭದ್ರಪ್ಪ ಅವರ ನಿಧನಕ್ಕೆ ಮಹಿಳಾ ಸಮಾಜದ ಉಪಾಧ್ಯಕ್ಷರಾದ ಶ್ರೀಮತಿ ನೀಲಗುಂದ ಜಯಮ್ಮ, ಜಾಗೃತ ಮಹಿಳಾ ಸಂಘದ ಕಾರ್ಯದರ್ಶಿ ಶ್ರೀಮತಿ ಅಮೀನಾ ಬಾನು, ವನಿತಾ ಸಮಾಜದ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಸೇರಿದಂತೆ, ಅನೇಕರು ಕಂಬನಿ ತೀವ್ರ ಮಿಡಿದಿದ್ದಾರೆ.

## ಪಂ. ಪುಟ್ಟರಾಜ ಸೇವಾ ಸಮಿತಿಯಿಂದ ಪಂ. ಪಂಚಾಕ್ಷರಿ ಗವಾಯಿ ಜಯಂತ್ಯೋತ್ಸವ



ದಾವಣಗೆರೆ, ಫೆ. 7- ಗಾನಯೋಗಿ ಶಿವಯೋಗಿ ಸಂಗೀತ ಜಗದ್ಗುರು ಪಂಡಿತ ಪಂಚಾಕ್ಷರಿ ಗವಾಯಿಗಳವರ 133ನೇ ಜಯಂತೋತ್ಸವವನ್ನು ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಅಂಗವಿಕಲರ ಆಶಾ ಕಿರಣ ಟ್ರಸ್ಟ್ ವಿಶೇಷ ಮಕ್ಕಳೊಂದಿಗೆ ಹಣ್ಣು ವಿತರಿಸುವ ಮೂಲಕ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಿತಿಯ ಅಧ್ಯಕ್ಷರು ಸೌಮ್ಯ ಸತೀಶ್ ಧಾರವಾಡ, ಪ್ರಧಾನ ಕಾರ್ಯದರ್ಶಿ ಮಮತಾ ನಾಗರಾಜ್, ಪದಾಧಿಕಾರಿಗಳು ಶಾಂತ ಶಿವಶಂಕರ್, ತನುಜಾ ಬೆಳ್ಳುಳ್ಳಿ, ಜ್ಯೋತಿ ಬೆಳ್ಳಿಗಾವಿ, ರತ್ನ ಕಾಟವೆ, ದೀಪ, ರಾಜಶ್ರೀ, ಸುಮಾ, ರೇಖಾ, ಮತ್ತು ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

## ಬಿಸಲೇರಿ ಬಸಮ್ಮ ಭೀಮಪ್ಪ ಪ್ರೌಢಶಾಲೆ ಮಾನ್ಯತೆ ರದ್ದು

ದಾವಣಗೆರೆ, ಫೆ. 7 - ತಾಲ್ಲೂಕಿನ ಐಗೂರು ಗ್ರಾಮದ ಶ್ರೀ ಜಯಪ್ರಕಾಶ್ ನಾರಾಯಣ ವಿದ್ಯಾಸಂಸ್ಥೆ ಆಶ್ರಯದಲ್ಲಿ ಕಾಡಜ್ಜಿಯಲ್ಲಿ ನಡೆಯುತ್ತಿದ್ದ ಶ್ರೀ ಬಿಸಲೇರಿ ಬಸಮ್ಮ ಭೀಮಪ್ಪ ಪ್ರೌಢಶಾಲೆಗೆ 8 ರಿಂದ 10 ತರಗತಿಯವರೆಗೆ ನೀಡಲಾದ ಮಾನ್ಯತೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಹಿಂಪಡೆಯಲಾಗಿದೆ. ಪೋಷಕರು ಈ ಶಾಲೆಗೆ ಮಕ್ಕಳನ್ನು ದಾಖಲಿಸಬಾರದೆಂದು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

## ಅಪ್ಪು ಶಾಲಾ ಮಾನ್ಯತೆ ರದ್ದು

ದಾವಣಗೆರೆ, ಫೆ. 7 - ನಗರದ ಹೊಂಡದ ರಸ್ತೆಯಲ್ಲಿ ಶ್ರೀ ಗಂಗಾಜಿ ಟ್ರಸ್ಟ್ ಆಶ್ರಯದಲ್ಲಿ ನಡೆಯುತ್ತಿದ್ದ ಅಪ್ಪು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆ (ಆಂಗ್ಲ) ಮಾಧ್ಯಮ ಶಾಲೆಗೆ 1 ರಿಂದ 8 ತರಗತಿಯವರೆಗೆ ನೀಡಲಾದ ಮಾನ್ಯತೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಹಿಂಪಡೆಯಲಾಗಿದೆ. ಪೋಷಕರು ಈ ಶಾಲೆಗೆ ಮಕ್ಕಳನ್ನು ದಾಖಲಿಸಬಾರದೆಂದು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.


**ರಾಗಿಮಸಲವಾಡದ ಶ್ರೀ ಕೆ. ಸಿದ್ದಪ್ಪ ನಿಧನ**



ದಾವಣಗೆರೆ ಸಿಟಿ, ವಿದ್ಯಾನಗರ ವಿನಾಯಕ ಬಡಾವಣೆ 5ನೇ ಕ್ರಾಸ್ ವಾಸಿ ಶ್ರೀಮತಿ ವಿಶಾಲಾಕ್ಷಮ್ಮ ಇವರ ಪತಿ

**ಶ್ರೀ ಕೆ. ಸಿದ್ದಪ್ಪ**

ಇವರು, ದಿನಾಂಕ : 7.2.2025ರ ಶುಕ್ರವಾರ ಮಧ್ಯಾಹ್ನ 3.15ಕ್ಕೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 8.2.2025ರ ಶನಿವಾರ ಮಧ್ಯಾಹ್ನ 12.30ಕ್ಕೆ ರಾಗಿ ಮಸಲವಾಡದ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :

**99161 12666, 95918 68706**


## ಹಣದುಬ್ಬರ ಅಂದಾಜು ಶೇ.4.2ಕ್ಕೆ ಇಳಿಕೆ

ಮುಂಬೈ, ಫೆ. 7 - 2025 - 26ರ ಸಾಲಿನಲ್ಲಿ ಹಣದುಬ್ಬರ ಪ್ರಮಾಣ ಶೇ. 4.2ರಷ್ಟರಲ್ಲಿದೆ ಎಂದು ರಿಸರ್ವ್ ಬ್ಯಾಂಕ್ ಅಂದಾಜಿಸಿದೆ. 2024 - 25ರ ಸಾಲಿನಲ್ಲಿ ಹಣದುಬ್ಬರ ಈ ಹಿಂದೆ ಅಂದಾಜಿಸಿದಂತೆ ಶೇಕಡ 4.8ರಷ್ಟರಲ್ಲಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ದ್ವೈಮಾಸಿಕ ಹಣಕಾಸು ನೀತಿಯನ್ನು ಪ್ರಕಟಿಸಿರುವ ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರ, ಉತ್ತಮ ಕೃಷಿ ಇಳುವರಿಯಿಂದಾಗಿ ಆಹಾರ ವಸ್ತುಗಳ ಪೂರೈಕೆಯ ಕಾರಣದಿಂದ ಯಾವುದೇ ಹಣದುಬ್ಬರ ಒತ್ತಡ ಕಂಡುಬರುವುದಿಲ್ಲ ಎಂದು ಹೇಳಿದ್ದಾರೆ.

ಮೂಲ ಹಣದುಬ್ಬರ ಏರಿಕೆಯಾದರೂ ಸಹ ಅದು ಮಧ್ಯಮ ಹಂತದಲ್ಲೇ ಇರಲಿದೆ ಎಂದು ಮಲ್ಹೋತ್ರ ಹೇಳಿದ್ದಾರೆ.

ಆದರೂ, ಹಣಕಾಸು ಮಾರುಕಟ್ಟೆಗಳ ಅನಿಶ್ಚಿತತೆ, ಇಂಧನ ಬೆಲೆಗಳಲ್ಲಿ ಏರಿಳಿತ ಹಾಗೂ ವ್ಯತಿರಿಕ್ತ ಹವಾಮಾನ ಪರಿಸ್ಥಿತಿಗಳ ಕಾರಣದಿಂದಾಗಿ ಹಣದುಬ್ಬರದ ಮೇಲೆ ಒತ್ತಡ ಮುಂದುವರೆಯಲಿದೆ ಎಂದವರು ತಿಳಿಸಿದ್ದಾರೆ.

ಮುಂದಿನ ವರ್ಷ ಮುಂಗಾರು ಸಾಮಾನ್ಯವಾಗಿದ್ದಲ್ಲಿ 2025 - 26ರ ಸಾಲಿನಲ್ಲಿ ಹಣದುಬ್ಬರ ದರ ಶೇ. 4.2ರಷ್ಟಿರಲ್ಲಿದೆ ಎಂದವರು ಹೇಳಿದ್ದಾರೆ.

## ಕೋವಿಡ್ ಅಡ್ಡ ಪರಿಣಾಮದಿಂದ ಸಾವು ಸಂಶೋಧನೆಗೆ ಮುಖ್ಯಮಂತ್ರಿ ಆದೇಶ

**(1ನೇ ಪುಟದಿಂದ)** ಸಾವಿಗೀಡಾಗುತ್ತಿರುವ ಬಗ್ಗೆ ಅನೇಕ ವರದಿಗಳು ಪ್ರಕಟಗೊಂಡಿವೆ. ಕೆಲವು ಚಿಂತಕರು ಮುಖ್ಯಮಂತ್ರಿ ಅವರಿಗೆ ನೇರವಾಗಿ ಪತ್ರ ಬರೆದು ಈ ಸಂಬಂಧ ತಜ್ಞರ ಸಮಿತಿ ರಚಿಸಿ ಪರಿಹಾರ ಕಂಡುಹಿಡಿಯುವಂತೆ ಮನವಿ ಮಾಡಿದ್ದಾರೆ. ಸಾರ್ವಜನಿಕರ ಅಹವಾಲಿಗೆ ಸ್ಪಂದಿಸಿರುವ ಮುಖ್ಯಮಂತ್ರಿ ಅವರು ಸಂಶೋಧನೆಗೆ ಆದೇಶಿಸಿದ್ದಾರೆ.

# ಹುಣ್ಣಿಮೆ ಸಾಂಸ್ಕೃತಿಕ-ಶೈಕ್ಷಣಿಕ ಉತ್ಸವ

**(1ನೇ ಪುಟದಿಂದ)** ಮೂಡಿಸಿದವರು ಎಂದರು.

ಯಾಗ, ಯಜ್ಞ ಮಾಡಿ ತಿನ್ನುವ ಪದಾರ್ಥ ಅಗ್ನಿಗೆ ಹಾಕುವುದು ಸರಿಯಲ್ಲ ಎಂದು ಯಜ್ಞ ಮಾಡುವುದನ್ನು ವಿರೋಧಿಸಿದರು. ಮರುಳಸಿದ್ದರನ್ನು ನಡೆ ಬಸವಣ್ಣ ಎಂದು ಕರೆಯಬಹುದಾಗಿದೆ ಎಂದರು.

ಧಾರವಾಡದ ಶ್ರೀ ಮುರುಘಾ ಮಠದ ಡಾ. ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಬೇಲಿಮಠದ ಮಹಾಸಂಸ್ಥಾನದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮೀಜಿ, ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಶ್ರೀ ಸಿದ್ಧಲಿಂಗ ಸ್ವಾಮೀಜಿ, ವಿಜ್ಞಾನ ಡಾ. ಶಿವಾನಂದ ಕಣವಿ, ವಿಜಯಪುರ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ. ಮಹಾಂತೇಶ ಬಿರಾದಾರ, ಸಂಶೋಧಕ ಅಶೋಕ್ ದುಮ್ಮಲೂರು, ನ್ಯಾ.ಎಲ್. ನಾರಾಯಣ ಸ್ವಾಮಿ ಇತರರು ಉಪಸ್ಥಿತರಿದ್ದರು.

### ನನ್ನ ಭವಿಷ್ಯದ ಭರವಸೆ ಬೆಳಕಾಗಿದ್ದು ತರಳಬಾಳು ವಿದ್ಯಾರ್ಥಿ ನಿಲಯ

ಬಡತನದಿಂದಾಗಿ ಪ್ರೌಢ ಶಿಕ್ಷಣ ವಂಚಿತನಾಗಿದ್ದ ನನಗೆ ಭವಿಷ್ಯದ ಭರವಸೆಯ ಬೆಳಕಾಗಿದ್ದುದು ಬೀರೂರಿನ ತರಳಬಾಳು ವಿದ್ಯಾರ್ಥಿ ನಿಲಯ ಹಾಗೂ ಅಂದು ಲಿಂ. ಶಿವಕುಮಾರ ಶ್ರೀಗಳು ನೀಡಿದ ಆಶೀರ್ವಾದ ಎಂದು ಗೊ.ರು.ಚನ್ನಬಸಪ್ಪ ಹೇಳಿದರು.

ನಾನು, ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ಸಮ್ಮೇಳನದ ಅಧ್ಯಕ್ಷನಾಗುವಷ್ಟು ಬೆಳೆಯಲು ತರಳಬಾಳು ವಿದ್ಯಾರ್ಥಿ ನಿಲಯವೇ ಕಾರಣ. ಹಿರಿಯ ಶ್ರೀಗಳಾದ ಶಿವಕುಮಾರ ಶ್ರೀಗಳಂತೆ ಇಂದಿನ ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳಿಗೂ ನನ್ನ ಮೇಲೆ ಪ್ರೀತಿ ಇದೆ ಎಂದು ಹೇಳಿದರು.

ಜೀವನ ಪ್ರಯಾಣದ ಕೊನೆಯ ನಿಲ್ದಾಣದಲ್ಲಿದ್ದೇನೆ. ಇಂತಹದ್ದೇ ಒಂದು ವೇದಿಕೆಯಲ್ಲಿ ಜ್ಯೋತಿಷಿಯೊಬ್ಬರು ತಾವು 100 ರನ್ ಭಾರಿಸಲಿದ್ದೀರಿ ಎಂದು ಹೇಳಿದ್ದರು. ಅದಕ್ಕೆ ಇನ್ನೂ 3 ರನ್ ಬಾಕಿ ಇದೆ. ಜ್ಯೋತಿಷಿಯ ಮಾತು ಸುಳ್ಳಾಗಬಾರದು ಎಂದು ಉಸಿರಾಡುತ್ತಿದ್ದೇನೆ ಎಂದು ಗೊ.ರು.ಚ. ಚಟಾಕಿ ಹಾರಿಸಿದರು.


**ಪಿ.ಜೆ. ಬಡಾವಣೆ ನಿವಾಸಿ ಕೆ. ರಾಜಶೇಖರ್ ನಾಯಕ ನಿಧನ**



ಪಿ.ಜೆ. ಬಡಾವಣೆ ನಿವಾಸಿ ದಿ|| ಶ್ರೀಮತಿ ಜಯಮ್ಮ ಮತ್ತು ಲೇ. ಕೆ. ಕಾಟ್ಟಯ್ಯ (ನಿವೃತ್ತ ವಲಯ ಅರಣ್ಯಾಧಿಕಾರಿ) ಇವರ ತೃತೀಯ ಪುತ್ರ

**ಕೆ.ರಾಜಶೇಖರ್ ನಾಯಕ**

ಇವರು ದಿನಾಂಕ : 07.02.2025 ಶುಕ್ರವಾರ ಬೆಳಿಗ್ಗೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು ಕುರುಡಿಹಳ್ಳಿ ಗ್ರಾಮದಲ್ಲಿ ದಿನಾಂಕ 07.02.2025ರ ಶುಕ್ರವಾರ ಸಂಜೆ 4.30ಕ್ಕೆ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ ಹಾಗೂ ದೇವರಹಟ್ಟಿ ವಂಶಸ್ಥರು



**ಭಾವಪೂರ್ಣ ಶ್ರದ್ಧಾಂಜಲಿ**



ಜಾಗೃತ ಮಹಿಳಾ ಸಂಘದ ಅಧ್ಯಕ್ಷರಾದ

**ಶ್ರೀಮತಿ ಉಮಾ ವೀರಭದ್ರಪ್ಪ**

ಇವರು ದಿನಾಂಕ 07.02.2025ರ ಶುಕ್ರವಾರ ನಿಧನರಾಗಿದ್ದು, ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಆಡಳಿತ ವರ್ಗ ಮತ್ತು ಸಿಬ್ಬಂದಿ ವರ್ಗ

**ಜಾಗೃತ ಮಹಿಳಾ ಸಂಘ (ರಿ), ದಾವಣಗೆರೆ.**


# ಮಹಾರಾಷ್ಟ್ರದಲ್ಲಿ ವಯಸ್ಕರ ಜನಸಂಖ್ಯೆಗಿಂತ ಹೆಚ್ಚಿನ ಮತದಾರರು

## ಚುನಾವಣಾ ಆಯೋಗ ಪ್ರತಿಕ್ರಿಯೆ ನೀಡದಿದ್ದರೆ ನ್ಯಾಯಾಲಯದ ಮೊರೆ : ರಾಹುಲ್

ನವದೆಹಲಿ, ಫೆ. 7 - ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಹಲವಾರು ಅಕ್ರಮಗಳು ನಡೆದಿವೆ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ರಾಜ್ಯದ ಇಡೀ ವಯಸ್ಕರ ಸಂಖ್ಯೆಗಿಂತ ಹೆಚ್ಚಿನ ಜನರು ಮತದಾರರಾಗಿ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಚುನಾವಣೆಗಳ ನಡುವೆ ಕಳೆದ ಐದು ವರ್ಷಕ್ಕಿಂತ ಹೆಚ್ಚು ಜನರು ನೋಂದಾಯಿಸಿಕೊಂಡಿದ್ದಾರೆ ಎಂದೂ ರಾಹುಲ್ ಗಾಂಧಿ ಹೇಳಿದ್ದಾರೆ.

2024ರ ಲೋಕಸಭೆ ಹಾಗೂ 2024ರ ವಿಧಾನಸಭಾ ಚುನಾವಣೆಯ ಕೇಂದ್ರೀಕೃತ ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ನೀಡದೇ ಇದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದವರು ಹೇಳಿದ್ದಾರೆ.

ವಿಧಾನಸಭಾ ಚುನಾವಣೆಗೆ ಮುಂಚೆ ಹಲವಾರು ಮತದಾರರ ಹೆಸರುಗಳನ್ನು ಅಳಿಸಲಾಗಿದೆ. ಇವರಲ್ಲಿ ಬಹುತೇಕರು ದಲಿತರು, ಬುಡಕಟ್ಟು ಜನರು ಹಾಗೂ ಅಲ್ಪಸಂಖ್ಯಾತರಾಗಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶಿವಸೇನೆ (ಯು.ಬಿ.ಟಿ.).ಯ ಸಂಜಯ್ ರಾವತ್ ಹಾಗೂ ಎನ್‌ಸಿಪಿ (ಎಸ್.ಪಿ.)ಯ ಸುಪ್ರಿಯಾ ಸುಲೆ ಉಪಸ್ಥಿತರಿದ್ದರು.

## ಯಡಿಯೂರಪ್ಪ ವಿರುದ್ಧದ ಮೊಕದ್ದಮೆ ರದ್ದತಿಗೆ ನಕಾರ

**(1ನೇ ಪುಟದಿಂದ)** ತೀರ್ಪನ್ನು ಇಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪೀಠ ಪ್ರಕಟಿಸಿ, ಪ್ರಕರಣದ ಕಾಗ್ನಿಜೆನ್ಸ್ ಆದೇಶ ರದ್ದುಪಡಿಸಿದರು. ಆದರೆ, ವಿಚಾರಣಾ ನ್ಯಾಯಾಲಯದ ಸಮನ್ಸ್ ಅನ್ನು ಬದಿಗಿರಿಸಿದ ಹೈಕೋರ್ಟ್, ಹೊಸದಾಗಿ ಮರುಪರಿಶೀಲಿಸುವಂತೆ ನಿರ್ದೇಶನ ನೀಡಿದೆ.

# ವಾಲ್ಮೀಕಿ ಜಾತ್ರೆಗೆ ಸಜ್ಜಾದ ರಾಜನಹಳ್ಳಿ ಮಠ : ಸಿದ್ಧತೆ ಪರಿಶೀಲಿಸಿದ ಡಿಸಿ, ಎಸ್ಪಿ

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಮತ್ತು ನಾಳೆ7ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವ ಜರುಗಲಿದ್ದು, ಅದಕ್ಕಾಗಿ ಗುರುಪೀಠ ಸಕಲ ರೀತಿಯಲ್ಲಿ ಸಜ್ಜುಗೊಂಡಿದೆ.

ವಾಲ್ಮೀಕಿ ಗುರುಪೀಠ ಸ್ಥಾಪನೆಗೊಂಡು 27 ವರ್ಷ ಪೂರೈಸಿದ್ದು, ಮಠದ ಮೂಲಕ ಸಮಾಜ ಸಂಘಟನೆ ಮತ್ತು ಸಮಾಜಕ್ಕೆ ಸಂವಿಧಾನ ಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಹಾಗೂ ಸಮಾಜವನ್ನು ಜಾಗೃತಿಗೊಳಿಸುವುದಕ್ಕಾಗಿ ಶ್ರೀ ಡಾ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಪ್ರತಿವರ್ಷ ಫೆ.8 ಮತ್ತು 9 ರಂದು ವಾಲ್ಮೀಕಿ ಜಾತ್ರೆಯನ್ನು ಆಚರಿಸುತ್ತಾ ಬಂದಿದ್ದಾರೆ. ಬುಡಕಟ್ಟು ಜನರ ಈ ಜಾತ್ರೆಗೆ ಸರ್ಕಾರ ಹಾಗೂ ಜಿಲ್ಲಾಡಳಿತ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಿದೆ.

ತೋಟಗಾರಿಕೆ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಆಸಕ್ತಿ ವಹಿಸಿ, ಈ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜೀವನಾಧಾರಿತ ಫಲಪುಷ್ಪ ಪ್ರದರ್ಶನ ಮೇಳವನ್ನು ಏರ್ಪಡಿಸಿರುವುದು ವಿಶೇಷವಾಗಿದೆ.

ಜಾತ್ರೆಯಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳ ಕಾರ್ಯ ಕ್ರಮ ಕುರಿತು ವಸ್ತು ಪ್ರದರ್ಶನವನ್ನು ಸಂಘಟಿಸಲಾಗಿದ್ದು, ಜೊತೆಗೆ ಸಂತೋಷ್ ಲಾಡ್ ಫೌಂಡೇಷನ್ ವತಿಯಿಂದ ಬೃಹತ್ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿದೆ.

**ಡಿಸಿ, ಎಸ್ಪಿ ಭೇಟಿ :** ವಾಲ್ಮೀಕಿ ಜಾತ್ರೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್ ಅವರು ಶುಕ್ರವಾರ ಸಂಜೆ ಮಠಕ್ಕೆ ಆಗಮಿಸಿ, ಅಂತಿಮ ಹಂತದ ಸಿದ್ಧತೆಗಳನ್ನು ಪರಿಶೀಲಿಸಿದರು.

ವೇದಿಕೆ, ಮಹಾಮಂಟಪ, ಊಟದ ಸ್ಥಳ, ಹೆಲಿಪ್ಯಾಡ್ ವಾಹನಗಳ ಪಾರ್ಕಿಂಗ್ ಸ್ಥಳಗಳನ್ನು ಶ್ರೀಗಳ ಜೊತೆ ವೀಕ್ಷಣೆ ಮಾಡಿದ ಡಿಸಿ, ಎಸ್ಪಿ ಅವರು ಸೂಕ್ತ ಬಂದೋಬಸ್ತ್ ಕುರಿತು ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ನಂತರ ಅಡುಗೆ ಮನೆಯಲ್ಲಿ ಮೂರು ದಿನಗಳ ಮಹಾ ದಾಸೋಹ ಸಿದ್ಧತೆಗೆ ಡಿಸಿ ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್ ಅವರು ಪೂಜೆ ಸಲ್ಲಿಸಿ, ಚಾಲನೆ ನೀಡಿದರು.





ಈ ಬಾರಿ ಜಾತ್ರೆಯ ವೇದಿಕೆಗೆ ಕಾಮ್ರೇಡ್ ಹೆಚ್.ಕೆ. ರಾಮಚಂದ್ರಪ್ಪ ಮತ್ತು ಮಹಾಮಂಟಪಕ್ಕೆ ಶ್ರೀ ಪುಣ್ಯಾನಂದ ಪುರಿ ಶ್ರೀಗಳ ಹೆಸರನ್ನು ಇಡಲಾಗಿದೆ. ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ಶಾಂತವೀರ ಸ್ವಾಮೀಜಿ, ಜಾತ್ರಾ ಸಮಿತಿ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಮಠದ ಧರ್ಮದರ್ಶಿಗಳಾದ ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್, ಹೊಸಪೇಟೆ ಜಂಬಯ್ಯ ನಾಯಕ, ಜಗಳೂರಿನ ಯುವ ಮುಖಂಡ ಎಂ.ಡಿ. ಕೀರ್ತಿಕುಮಾರ್, ಮಹಿಳಾ ಮುಖಂಡರಾದ ವಿಜಯಶ್ರೀ, ಪಾರ್ವತಿ, ಗೌರಮ್ಮ, ಕೆ.ಬೇವಿನಹಳ್ಳಿ ಹಾಲೇಶ್, ಜಿ.ಆರ್. ನಾಗರಾಜ್, ಪಾಳೇಗಾರ್ ನಾಗರಾಜ್, ರಾಜನಹಳ್ಳಿ ಭೀಮಣ್ಣ, ವಕೀಲ ರಂಗನಾಥ್, ಪತ್ರಕರ್ತ ಪ್ರಕಾಶ್ ಮತ್ತಿತರರು ಈ ವೇಳೆ ಇದ್ದರು.

## ಇಂದಿನಿಂದ ಶ್ರೀ ವಾಲ್ಮೀಕಿ ಜಾತ್ರಾ ಮಹೋತ್ಸವ



ದಾವಣಗೆರೆ, ಫೆ.7- ಹರಿಹರ ತಾಲ್ಲೂಕು ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಫೆ.8 ಮತ್ತು 9ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಜಾತ್ರಾ ಮಹೋತ್ಸವದ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶ್ರೀಮಠದ 27ನೇ ವಾರ್ಷಿಕೋತ್ಸವ, ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾಸ್ವಾಮೀಜಿಯವರ 18ನೇ ವರ್ಷದ ಪುಣ್ಯಾರಾಧನೆ ಹಾಗೂ ಜಗದ್ಗುರು ಶ್ರೀ ಡಾ.ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿಯವರ 17ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ನಡೆಯಲಿದೆ ಎಂದು ಮಾಹಿತಿ ನೀಡಿದರು.

ನಾಳೆ ದಿನಾಂಕ 8ರ ಶನಿವಾರ ಬೆಳಿಗ್ಗೆ 7ಕ್ಕೆ ರಾಜನಹಳ್ಳಿ ಗ್ರಾಮದಿಂದ ಶ್ರೀ ಮಠದವರೆಗೆ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಗುರುಪೀಠದ ಡಾ. ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಲಿದ್ದಾರೆ. ಶಾಸಕ ಬಿ.ಪಿ.ಹರೀಶ್, ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಅಧ್ಯಕ್ಷ ಬಿ. ದೇವೇಂದ್ರಪ್ಪ ಚಿಕ್ಕಮ್ಮನಹಟ್ಟಿ, ಟಿ.ಓಬಳಪ್ಪ ಇತರೆ ಗಣ್ಯರು ಆಗಮಿಸಲಿದ್ದಾರೆ.

ನಂತರ 8.30ಕ್ಕೆ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ ನಡೆಯಲಿದೆ. 9.30ಕ್ಕೆ ಕೃಷಿ ವಸ್ತು ಪ್ರದರ್ಶನ ಮೇಳ, ಉದ್ಯೋಗ ಮೇಳ ನಡೆಯಲಿದೆ. 10.30ಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ಜೀವನಾಧಾರಿತ ಫಲಪುಷ್ಪ ಪ್ರದರ್ಶನ ಮೇಳ ನಡೆಯಲಿದೆ.

ಬೆಳಿಗ್ಗೆ 11ಕ್ಕೆ ಮಹಿಳಾ ಗೋಷ್ಠಿಯನ್ನು ಸಂಡೂರು ಶಾಸಕಿ ಅನ್ನಪೂರ್ಣ ಈ. ತುಕಾರಾಂ ಉದ್ಘಾಟನೆ ಮಾಡುವರು. ದೇವದುರ್ಗ ಶಾಸಕ ಕರೆಮ್ಮ ಜಿ.ನಾಯಕ, ಎಂಎಲ್ಸಿ ಹೇಮಲತಾ ನಾಯಕ, ಶಾಂತಲಾ ರಾಜಣ್ಣ, ಪ್ರಿಯಾಂಕ ಸತೀಶ್ ಜಾರಕಿಹೊಳಿ, ಡಾ.ಅನುಸೂಯ ಕೆಂಪನಹಳ್ಳಿ ಮಾಡಲಿದ್ದಾರೆ. ವಿವಿಧ ಕ್ಷೇತ್ರಗಳ ಗಣ್ಯರು ಆಗಮಿಸಲಿದ್ದಾರೆ. ಮಧ್ಯಾಹ್ನ 2.30ರಿಂದ ನೌಕರರ ಗೋಷ್ಠಿ ಮತ್ತು ಕಾರ್ಯಾಗಾರ ನಡೆಯಲಿದೆ. ಸಂಜೆ 5ಕ್ಕೆ ಸಂಘಟನಾ ಗೋಷ್ಠಿ ನಡೆಯಲಿದೆ.

ನಾಡಿದ್ದು ದಿನಾಂಕ 9ರಂದು ಬೆಳಿಗ್ಗೆ 9ಕ್ಕೆ ಧರ್ಮ ಸಭೆ ನಡೆಯಲಿದ್ದು, ರಾಜ್ಯದ ವಿವಿಧ ಮಠಾಧೀಶರು ಸಾನಿಧ್ಯ ವಹಿಸಲಿದ್ದಾರೆ. ಇದೇ ವೇಳೆ ಸಾಧನೆ ಮಾಡಿದ ಸಾಧಕರಿಗೆ 2024ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಲಾಗುವುದು. ಮಧ್ಯಾಹ್ನ 12.30ಕ್ಕೆ ಜನ ಜಾಗೃತಿ ಜಾತ್ರಾ ಮಹೋತ್ಸವ ನಡೆಯಲಿದೆ. ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮಾಡುವರು. ಜಾತ್ರಾ ಸಮಿತಿಯ ಅಧ್ಯಕ್ಷ ಬಿ.ದೇವೇಂದ್ರಪ್ಪ ಚಿಕ್ಕಮ್ಮನಹಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕೇಂದ್ರದ ಬೃಹತ್ ಕೈಗಾರಿಕಾ ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಆಹಾರ, ನಾಗರಿಕ ವಿತರಣಾ ಖಾತೆ ಸಚಿವ ಪ್ರಹ್ಲಾದ ಜೋಷಿ, ಕರ್ನಾಟಕ ಸರ್ಕಾರದ ವಿಪಕ್ಷ ನಾಯಕ ಆರ್.ಅಶೋಕ್, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎನ್. ರಾಜಣ್ಣ, ಮಾಜಿ ಸಚಿವ ಬಿ.ಶ್ರೀರಾಮುಲು, ಶ್ರೀನಿವಾಸ್ ದಾಸಕರಿಯಪ್ಪ, ಹಾವೇರಿ ಸಂಸದ ಬಸವರಾಜ್ ಬೊಮ್ಮಾಯಿ, ವಿ.ಸೋಮಣ್ಣ, ಬಿ.ವೈ. ವಿಜಯೇಂದ್ರ, ಎಸ್. ಎಸ್. ಮಲ್ಲಿಕಾರ್ಜುನ್, ಕೆ.ಹೆಚ್. ಮುನಿಯಪ್ಪ, ಡಾ.ಜಿ.ಪರಮೇಶ್ವರ, ಹೆಚ್.ಸಿ. ಮಹಾದೇವಪ್ಪ, ಎಂ.ಬಿ.ಪಾಟೀಲ್, ಸಂತೋಷ ಲಾಡ್, ಪ್ರಿಯಾಂಕ ಖರ್ಗೆ, ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಜಿ.ಕುಮಾರ ನಾಯಕ, ಈ ತುಕಾರಾಂ, ವಿ.ಎಸ್.ಉಗ್ರಪ್ಪ, ಬಿ.ನಾಗೇಂದ್ರ ಸೇರಿದಂತೆ ರಾಜ್ಯ, ಕೇಂದ್ರದ ಶಾಸಕರು, ಸಂಸದರು ಆಗಮಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜಿಗಳಿ ಪ್ರಕಾಶ್, ವಿನಾಯಕ ಬಿ.ಹೆಚ್. ಪೈಲ್ವಾನ್, ಪ್ರವೀಣ್ ಶಾಮನೂರು, ಜಿ.ಆರ್. ನಾಗರಾಜ್, ಎಸ್.ಸತೀಶ್ ಇದ್ದರು.

# ರಾಣೇಬೆನ್ನೂರಿನಲ್ಲಿ ಇಂದು ಮತ್ತು ನಾಳೆ ಕರ್ನಾಟಕ ವೈಭವ ವೈಚಾರಿಕ ಹಬ್ಬ




ಇಲ್ಲಿನ ಬಸ್ ನಿಲ್ದಾಣದ ಎದುರಿನ ರಾಜರಾಜೇಶ್ವರಿ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ವೈಭವ ವೈಚಾರಿಕ ಹಬ್ಬ ಸಮಾರಂಭವನ್ನು ಇಂದು ಮತ್ತು ನಾಳೆ ಆಯೋಜಿಸಲಾಗಿದೆ ಎಂದು ಸಂಯೋಜಕ ಕೆ.ಎನ್. ಪಾಟೀಲ್ ತಿಳಿಸಿದ್ದಾರೆ.

ಇಂದು ಸೂಲಿಬೆಲೆ ಚಕ್ರವರ್ತಿ ಅಧ್ಯಕ್ಷತೆಯಲ್ಲಿ ಯುವ ಗೋಷ್ಠಿ ನಡೆಯುವುದು. ಮದ್ಯಾಹ್ನ ತೇಜಸ್ವಿನಿ ಅನಂತಕುಮಾರ್ ಹಾಗೂ ಅಲಕಾ ಇನಾಮದಾರ ನೇತೃತ್ವದಲ್ಲಿ ಮಹಿಳಾ ಗೋಷ್ಠಿ, ಸಂಜೆ ಸಾರ್ವಜನಿಕ ಕಾರ್ಯಕ್ರಮದ ನಂತರ ಕಲಾ ಪ್ರದರ್ಶನದಲ್ಲಿ ರಾಮು ಮೂಲಗಿ ಅವರಿಂದ ಜನಪದ ಹಾಡುಗಳು.

ನಾಳೆ ಭಾನುವಾರ ಬೆಳಿಗ್ಗೆ ಕೃಷಿ ಪದವೀಧರರ ಸಂಘದ ಸಹಯೋಗದಲ್ಲಿ 'ಹೊನ್ನ ಬಿತ್ತೇವು ಜಗಕೆಲ್ಲ' ರೈತ ಗೋಷ್ಠಿಯಲ್ಲಿ ಕಲಬುರ್ಗಿ ವಿಕಾಸ ಅಕಾಡೆಮಿ ಅಧ್ಯಕ್ಷರು ಬಸವರಾಜ ಸೇಡಂ ಭಾಷಣ, ಸಂಜೆ ಸಮಾರೋಪ ಸಮಾರಂಭ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಸಂಸದ ಬಸವರಾಜ ಬೊಮ್ಮಾಯಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗತಿ ಭಾಗವಹಿಸುವರು. ಪ್ರಜ್ಞಾ ಪ್ರವಾಹದ ಸಂಯೋಜಕ ರಘುನಂದನ ಅವರಿಂದ ಸಮಾರೋಪದ ನುಡಿಗಳು. ನಂತರ ಸಂಗೀತ ಕಲಾವಿದೆ ಸಂಗೀತಾ ಕಟ್ಟಿ ಅವರಿಗೆ 'ಸರ್ವಜ್ಞ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ನಡೆಯಲಿದೆ.

# ಅಂತರರಾಷ್ಟ್ರೀಯ ಅಪರಾಧಿಕ ನ್ಯಾಯಾಲಯದ ಮೇಲೆ ಟ್ರಂಪ್ ನಿರ್ಬಂಧ

## ಮಿತ್ರ ದೇಶವಾದ ಇಸ್ರೇಲ್ ವಿರುದ್ಧ ತನಿಖೆ ನಡೆಸಿದ್ದಕ್ಕೆ ಕ್ರಮ

ವಾಷಿಂಗ್ಟನ್, ಫೆ. 7 - ಅಮೆರಿಕದ ಮಿತ್ರ ದೇಶವಾದ ಇಸ್ರೇಲ್ ವಿರುದ್ಧ ತನಿಖೆ ನಡೆಸುತ್ತಿರುವ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯದ ಮೇಲೆ ನಿರ್ಬಂಧ ಹೇರಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರ್ಯಕಾರಿ ಆದೇಶ ಹೊರಡಿಸಿದ್ದಾರೆ.

ಅಮೆರಿಕ ಹಾಗೂ ಇಸ್ರೇಲ್ ಎರಡೂ ದೇಶಗಳು ಈ ನ್ಯಾಯಾಲಯದ ಸದಸ್ಯವಾಗಿಲ್ಲ ಹಾಗೂ ಈ ನ್ಯಾಯಾಲಯಕ್ಕೆ ಮನ್ನಣೆ ನೀಡುತ್ತಿಲ್ಲ.

ಹಮಾಸ್ ಮೇಲೆ ಇಸ್ರೇಲ್ ನಡೆಸಿದ ಸಮರಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ನ್ಯಾಯಾಲಯವು ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ವಿರುದ್ಧ ಬಂಧನದ ವಾರೆಂಟ್ ಹೊರಡಿಸಿದೆ. ಗಾಜಾದಲ್ಲಿ ಯುದ್ಧ ಅಪರಾಧ ಎಸಗಲಾಗಿದೆ ಎಂದು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ದೂರುಗಳು ದಾಖಲಾಗಿದ್ದವು.

ಹಮಾಸ್ ಉಗ್ರವಾದಿ ಸಂಘಟನೆಯು ಅಕ್ಟೋಬರ್ 2023ರಲ್ಲಿ ಇಸ್ರೇಲ್ ಮೇಲೆ ದಾಳಿ ನಡೆಸಿತ್ತು. ನಂತರ ಗಾಜಾದಲ್ಲಿ ಹಮಾಸ್ ವಿರುದ್ಧ ಇಸ್ರೆಲ್ ಸಮರ ಸಾರಿತ್ತು.

ಅಮೆರಿಕಾ ಹಾಗೂ ಮಿತ್ರ ದೇಶವಾದ ಇಸ್ರೇಲ್ ವಿರುದ್ಧ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯವು ಆಧಾರ ರಹಿತ ಹಾಗೂ ಅಕ್ರಮ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಆಧಾರ ರಹಿತವಾಗಿ ಬಂಧನದ ವಾರೆಂಟ್ ಹೊರಡಿಸುವ ಮೂಲಕ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ.

ಅಮೆರಿಕ ಇಲ್ಲವೇ ಇಸ್ರೇಲ್ ಮೇಲೆ ಅಂತರರಾಷ್ಟ್ರೀಯ ನ್ಯಾಯಾಲಯ ಯಾವುದೇ ಅಧಿಕಾರ ಹೊಂದಿಲ್ಲ. ಎರಡೂ ದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಮೂಲಕ ನ್ಯಾಯಾಲಯ ಅಪಾಯಕಾರಿ ನಡಾವಳಿಗೆ ದಾರಿ ಮಾಡಿಕೊಟ್ಟಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ನ್ಯಾಯಾಲಯದ ಈ ಹದ್ದು ಮೀರಿದ ವರ್ತನೆಗೆ ಕಾರಣವಾಗುವವರ ವಿರುದ್ಧ ಅಮೆರಿಕ ಕ್ರಮ ತೆಗೆದುಕೊಳ್ಳಲಿದೆ. ಅವರ ಆಸ್ತಿಗಳ ವಶ ಹಾಗೂ ಅಂತರರಾಷ್ಟ್ರೀಯ ನ್ಯಾಯಾಲಯದ ಅಧಿಕಾರಿಗಳು, ಉದ್ಯೋಗಿಗಳು ಹಾಗೂ ಸಂಬಂಧಿಗಳು ಅಮೆರಿಕಗೆ ಪ್ರವೇಶಿಸಲು ಅವಕಾಶ ನಿರ್ಬಂಧಿಸುವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

# ಫೆ. 12 ರಂದು ಪ್ರಧಾನಿ ಮೋದಿ ಅಮೆರಿಕ ಭೇಟಿ

ನವದೆಹಲಿ, ಫೆ. 7 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಫೆಬ್ರವರಿ 12ರಂದು ಎರಡು ದಿನಗಳ ಅಮೆರಿಕ ಭೇಟಿಗೆ ತೆರಳಲಿದ್ದಾರೆ. ಈ ಸಂದರ್ಭದಲ್ಲಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭೇಟಿ ಮಾಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಪ್ರಧಾನಿ ಮೋದಿ ಅಮೆರಿಕದ ಭೇಟಿಯಿಂದ ದ್ವಿಪಕ್ಷೀಯ ಸಂಬಂಧಗಳಿಗೆ ಇನ್ನಷ್ಟು ಬಲ ಸಿಗಲಿದೆ ಎಂದು ಹೇಳಿದ್ದಾರೆ. ಇದಕ್ಕೂ ಮುಂಚೆ ಫೆಬ್ರವರಿ 10ರಿಂದ 12ರವರೆಗೆ ಮೋದಿ ಫ್ರಾನ್ಸ್‌ಗೆ ಭೇಟಿ ನೀಡಲಿದ್ದಾರೆ. ಅಲ್ಲಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಜೊತೆ ಎಐ ಶೃಂಗ ಸಭೆಯ ಅಧ್ಯಕ್ಷತೆಯ ವಹಿಸಲಿದ್ದಾರೆ.

# ಬಾಂಗ್ಲಾದಾದ್ಯಂತ ದಾಳಿ

ಢಾಕ, ಫೆ.7 - ಷೇಕ್ ಹಸೀನಾ ಅವರ ಅವಾಮಿ ಲೀಗ್ ನಾಯಕರ ಮನೆಗಳ ಮೇಲೆ ಬಾಂಗ್ಲಾ ದೇಶದಾದ್ಯಂತ ಪ್ರತಿಭಟನಾಕಾರರು ದಾಳಿ ನಡೆಸಿದ್ದಾರೆ. ಬಾಂಗ್ಲಾದೇಶದ ಸ್ಥಾಪಕ ಷೇಕ್ ಮುಜೀಬುರ್ ರೆಹಮಾನ್ ಅವರ ಸ್ಮಾರಕ ಹಾಗೂ ಪ್ರತಿಕೃತಿಗಳನ್ನು ವಿರೂಪಗೊಳಿಸಲಾಗಿದೆ.

ಷೇಕ್ ಹಸೀನಾ ಅವರು ಆನ್‌ಲೈನ್ ಮೂಲಕ ಭಾಷಣ ಮಾಡಿದ ನಂತರ ದೇಶದಾದ್ಯಂತ ವಿಧ್ವಂಸಕ ಕೃತ್ಯಗಳು ನಡೆದಿವೆ.

ಡಾಕಾದ ಬನಾನಿ ಎಂಬಲ್ಲಿರುವ ಅವಾಮಿ ಲೀಗ್ ಹಿರಿಯ ನಾಯಕ ಷೇಕ್ ಸಲೀಂ ಅವರ ಮನೆಗೆ ಬೆಂಕಿ ಹಚ್ಚಲಾಗಿದೆ. ಪೊಲೀಸ್ ರಕ್ಷಣೆ ಇಲ್ಲದ ಕಾರಣ ಅಗ್ನಿಶಾಮಕ ದಳದವರು ಸ್ಥಳಕ್ಕೆ ತಲುಪುವುದು ತಡವಾಗಿತ್ತು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ನಿನ್ನೆಯಷ್ಟೇ ಷೇಕ್ ಮುಜೀಬ್ ಅವರ ನಿವಾಸಕ್ಕೆ ಬೆಂಕಿ ಹಚ್ಚಲಾಗಿತ್ತು. ಅವಾಮಿ ಲೀಗ್ ಇನ್ನೋರ್ವ ನಾಯಕ ಒಬೇದುಲ್ ಖಾದರ್ ಅವರ ಮನೆಯನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಗಿತ್ತು.

ರಾಜಶಾಹಿ ಎಂಬಲ್ಲಿ ಮಾಜಿ ವಿದೇಶಾಂಗ ಸಚಿವ ಶಹರ್ಯಾರ್ ಆಲಂ ಅವರಿಗೆ ಸೇರಿದ ಮೂರು ಅಂತಸ್ತಿನ ಮನೆಗೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದರು. ಕ್ಯುಮಿಲಾ ನ್ಯಾಯಾಲಯ ಹಾಗೂ ಕ್ಯುಮಿಲಾ ಉದ್ಯಾನವನದ ಆವರಣದಲ್ಲಿರುವ ಷೇಕ್ ಮುಜೀಬ್ ಅವರ ಸ್ಮಾರಕಗಳನ್ನು ಧ್ವಂಸಗೊಳಿಸಲಾಗಿದೆ.

ನಾರಾಯಣ ಗಂಜ್ ನ್ಯಾಯಾಲಯದ ಆವರಣದಲ್ಲಿದ್ದ ಶೇಕ್ ಮುಜೀಬ್ ಅವರ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ.

ನ್ಯಾಯಾಲಯಕ್ಕೆ ಕರೆದೊಯ್ಯಲಾಗುತ್ತಿದ್ದ ಅವಾಮಿ ಲೀಗ್ ಬಾಂಗ್ಲಾದೇಶ್ ವಿದ್ಯಾರ್ಥಿ ಸಂಘಟನೆಯ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ.

# ಭರಮಸಾಗರದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು

ಭರಮಸಾಗರದಲ್ಲಿ ಇಂದು ಸಂಜೆ 6.30ಕ್ಕೆ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ 'ನ್ಯಾಯಾಲಯ ಮತ್ತು ಸಮಾಜ' ಶೀರ್ಷಿಕೆಯಡಿ ಐದನೇ ದಿನದ ಕಾರ್ಯಕ್ರಮ ನಡೆಯಲಿದೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನಿವೃತ್ತ ನ್ಯಾಯಮೂರ್ತಿಗಳಾದ ಎನ್. ಸಂತೋಷ್ ಹೆಗ್ಡೆ, ಪ್ರಭಾಕರ ಶಾಸ್ತ್ರಿ, ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಕೃಷ್ಣಾ ಎನ್. ದೀಕ್ಷಿತ್, ವೇದವ್ಯಾಸಾಚಾರ್ ಶ್ರೀಶಾನಂದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನ್ಯಾಯಮೂರ್ತಿ ಹೆಚ್.ಎ.ಮೋಹನ್, ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ಹೈಕೋರ್ಟ್ ವಕೀಲರಾದ ಸಂದೀಪ್ ಪಾಟೀಲ್, ಸಹಾಯಕ ಸರ್ಕಾರಿ ಅಭಿಯೋಜಕ ಕೆ.ಬಿ. ನಾಡಗೌಡ ಉಪನ್ಯಾಸ ನೀಡಲಿದ್ದಾರೆ. ಮಂಡ್ಯದ ಸಾಹಿತಿ ಡಾ. ಪ್ರದೀಪ್ ಕುಮಾರ ಹೆಬ್ರಿ ಉಪಸ್ಥಿತರಿರುವರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಚಿಂಚೋಳಿ ಚಂದಾಪುರ ಆಕಾಶವಾಣಿ ಕಲಾವಿದ ರೇವಣಸಿದ್ಧಯ್ಯ ಹಿರೇಮಠ ಹಾಗೂ ತಂಡದವರಿಂದ ವಚನಗೀತೆ, ಬಹದ್ದೂರುಘಟ್ಟ ಶ್ರೀಮತಿ ಕಲ್ಲಮ್ಮ ಪ್ರೌಢಶಾಲೆಯ ಸೋಲಿಗರ ನೃತ್ಯ ತಂಡದಿಂದ ಜಾನಪದ ಸಿರಿ, ದಾವಣಗೆರೆ ಅನುಭವ ಮಂಟಪದ ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆಯ ತಂಡದಿಂದ ಜಾನಪದ ನೃತ್ಯ, ಸಿರಿಗೆರೆ ತರಳಬಾಳು ಕಲಾ ಸಂಘದಿಂದ ಗೋವಿನಹಾಡು ನೃತ್ಯ ರೂಪಕ ಹಾಗೂ ದಾವಣಗೆರೆ ಅನುಭವ ಮಂಟಪದ ಶಾಲೆಯ ಐಸಿಎಸ್‌ಇ ವಿಭಾಗದ ತಂಡದಿಂದ ಸಮಾಯ್ ನೃತ್ಯ ಏರ್ಪಡಿಸಲಾಗಿದೆ.

# ಈ ವರ್ಷ ಭಾರತದ ರಫ್ತು 800 ಶತಕೋಟಿ ಡಾಲರ್

ನವದೆಹಲಿ, ಫೆ. 7 - ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ರಫ್ತು 800 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ದೇಶದ ರಫ್ತು ಕಳೆದ ನಾಲ್ಕು ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಾಗಿದೆ. ಈ ವರ್ಷವೂ ಬೆಳವಣಿಗೆ ಆಗುತ್ತಿದೆ. ಈ ವರ್ಷ ಒಟ್ಟಾರೆ ರಫ್ತು ಪ್ರಮಾಣ 800 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ ಎಂದಿದ್ದಾರೆ.

# ಕಾರ್ಗಿಲ್ ಸಮರ : ಮಾಜಿ ಸೈನಿಕ ಅಧಿಕಾರಿ ಅರ್ಜಿಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಫೆ. 7 - 1999ರ ಕಾರ್ಗಿಲ್ ಸಮರಕ್ಕೆ ಮುಂಚೆ ಪಾಕಿಸ್ತಾನದಿಂದ ನುಸುಳುವಿಕೆ ನಡೆದಿದೆ ಎಂಬ ಗುಪ್ತಚರ ವರದಿಯ ಕುರಿತು ಕ್ರಮ ತೆಗೆದುಕೊಳ್ಳುವಲ್ಲಿ ಲೋಪಗಳಾಗಿದ್ದವು ಎಂದು ಸೈನ್ಯದ ಮಾಜಿ ಅಧಿಕಾರಿಯೊಬ್ಬರು ದಾಖಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನ್ಯಾಯಾಂಗ ಸಾಮಾನ್ಯವಾಗಿ ರಾಷ್ಟ್ರೀಯ ಭದ್ರತಾ ವಿಷಯಗಳಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. 1999ರ ಸಮರದಲ್ಲಿ ಏನಾಯಿತು ಎಂಬುದು ಕಾರ್ಯಾಂಗದ ನಿರ್ಧಾರಕ್ಕೆ ಸಂಬಂಧಿಸಿದ ಆಂತರಿಕ ವಿಷಯವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಪಂಚಕುಲದ ಮಾಜಿ ಸೈನಿಕ ಅಧಿಕಾರಿ ಮನೀಷ್ ಭಟ್ನಾಗರ್ ಅವರು ದಾಖಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಕುರಿತು ನ್ಯಾಯಾಲಯ ಈ ನಿಲುವು ತಳೆದಿದೆ.

ಕಾರ್ಗಿಲ್ ನುಸುಳಿವಿಕೆಗೆ ಸಂಬಂಧಿಸಿದಂತೆ ಸಾಕಷ್ಟು ಮೊದಲೇ ಮಾಹಿತಿ ಕೊಟ್ಟಿದ್ದೆ ಎಂದು ಸೈನಿಕ ಅಧಿಕಾರಿ ಹೇಳಿದ್ದರು.

ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯದ ನಿಲುವು ಅರಿತ ಭಟ್ನಾಗರ್, ಅರ್ಜಿಯನ್ನು ವಾಪಸ್ ಪಡೆಯುವುದಾಗಿ ಹೇಳಿದರು. ಇದಕ್ಕೆ ನ್ಯಾಯಾಲಯ ಸಮ್ಮತಿಸಿತು.

ಪ್ಯಾರಾಚೂಟ್ ರೆಜಿಮೆಂಟ್‌ನ ಐದನೇ ಬೆಟಾಲಿಯನ್ ಮಾಜಿ ಅಧಿಕಾರಿಯಾಗಿರುವ ಭಟ್ನಾಗರ್, ಈ ಹಿಂದೆಯೂ ನುಸುಳುವಿಕೆಗೆ ಸಂಬಂಧಿಸಿದಂತೆ ಹಲವಾರು ಪ್ರಶ್ನೆಗಳನ್ನು ಮುಂದಿಟ್ಟಿದ್ದರು..

ಕಾರ್ಗಿಲ್ ನುಸುಳುವಿಕೆಗೆ ಸಂಬಂಧಿಸಿದಂತೆ 1999ರ ಜನವರಿ - ಫೆಬ್ರವರಿ ಅವಧಿಯಲ್ಲೇ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೆ ಎಂದು ಭಟ್ನಾಗರ್ ತಿಳಿಸಿದ್ದರು. ಪೂರ್ಣ ಪ್ರಮಾಣದ ಯುದ್ಧ ಆರಂಭವಾದ ನಂತರ ಬೇರೊಂದು ನೆಪ ಹೇಳಿ ತಮ್ಮನ್ನು ಕೋರ್ಟ್ ಮಾರ್ಷಲ್‌ಗೆ ಗುರಿ ಮಾಡಲಾಗಿತ್ತು ಹಾಗೂ ಸೈನ್ಯದಿಂದ ರಜೆಯ ಮೇಲೆ ಕಳಿಸಲಾಗಿತ್ತು ಎಂದವರು ಹೇಳಿದ್ದರು.

1999ರ ಮೇ ತಿಂಗಳಿನಿಂದ ಕಾರ್ಗಿಲ್ ಸಮರ ಆರಂಭವಾಗಿತ್ತು.

# ಮುಡಾ ಪ್ರಕರಣ : ಸಿದ್ದರಾಮಯ್ಯ ನಿರಪರಾಧಿ ಎಂದು ಹೈಕೋರ್ಟ್ ಹೇಳಿಲ್ಲ

ಬೆಂಗಳೂರು, ಫೆ. 7- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಪ್ರಕರಣದ ತೀರ್ಪಿನಲ್ಲಿ ಎಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಪರಾಧಿ ಎಂಬುದಾಗಿ ಹೈಕೋರ್ಟ್ ಹೇಳಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ಲೇಷಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣ ಸಿಬಿಐಯಿಂದ ತನಿಖೆ ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ರಾಜ್ಯ ಹೈಕೋರ್ಟ್ ತಿರಸ್ಕರಿಸಿದೆ, ಆದರೆ, ಇದರರ್ಥ ಸಿದ್ದರಾಮಯ್ಯ ನಿರಪರಾಧಿ ಎಂಬುದಲ್ಲ ಎಂದರು.

ಸಿದ್ದರಾಮಯ್ಯ ಅವರನ್ನು ಹೈಕೋರ್ಟ್ ಆರೋಪ ಮುಕ್ತರನ್ನಾಗಿ ಮಾಡಿಲ್ಲ, ಸಿಬಿಐ ತನಿಖೆಗೆ ಕೊಡುವುದಿಲ್ಲ ಎಂಬುದಷ್ಟನ್ನೇ ಹೇಳಿದೆ, ಇದರಿಂದ ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಕುಟುಂಬ ಒಳಗೊಂಡ ಆರೋಪ ಕುರಿತು ಬಿಜೆಪಿ ನಡೆಸಿದ ಹೋರಾಟ ಮತ್ತು ಪಾದಯಾತ್ರೆಗೆ ಹಿನ್ನಡೆಯಾಗಿಲ್ಲ. ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ.) ತನಿಖೆ ನಡೆಯುತ್ತಿದೆ, ಮುಂದೇನು ಆಗುತ್ತದೆ ಎಂಬುದನ್ನು ಕಾದು ನೋಡೋಣ.

ಹೈಕೋರ್ಟ್ ತೀರ್ಪಿನಲ್ಲಿ ಮುಖ್ಯಮಂತ್ರಿ ಕುಟುಂಬ ನಿರಪರಾಧಿ ಎಂಬುದಾಗಿ ಹೇಳಿದೆಯೇ ? ಎಂದು ಪ್ರಶ್ನಿಸಿದ ಅವರು, ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಕುಟುಂಬ ಭಾಗಿ ಆಗಿರುವುದು ಮತ್ತು ಸಾವಿರಾರು ಕೋಟಿ ರೂ. ಲೂಟಿ ಆಗಿದೆ ಎಂದು ಆರೋಪಿಸಿ ಹೋರಾಟ ಮಾಡಿದ್ದೆವು, ನಮ್ಮ ಆರೋಪಕ್ಕೆ ಈಗಲೂ ಬದ್ಧರಾಗಿದ್ದೇವೆ, ಲೋಕಾಯುಕ್ತ ತನಿಖೆ ಪೂರ್ಣ ವರದಿ ನಂತರ ಮಾತನಾಡುತ್ತೇವೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಮೊಕದ್ದಮೆಯಲ್ಲಿ ವಿಚಾರಣಾ ನ್ಯಾಯಾಲಯದ ಸಮನ್ಸ್ ಅನ್ನು ಹೈಕೋರ್ಟ್ ಬದಿಗಿರಿಸಿ, ವಾದ ಆಲಿಸಿ ಸಮನ್ಸ್ ರದ್ದು ಪಡಿಸಿ, ಮರುಪರಿಶೀಲಿಸುವಂತೆ ನಿರ್ದೇಶನ ನೀಡಿದೆ ಎಂದರು.

# ಶ್ರೀ ಅಕ್ಕಮಹಾದೇವಿ ವಧು-ವರಾನ್ವೇಷಣಾ ಕೇಂದ್ರದ ರಜತೋತ್ಸವ : ಇಂದು ಸಮಾವೇಶ

ಪಿ.ಜೆ. ಬಡಾವಣೆಯಲ್ಲಿರುವ ಶ್ರೀ ಅಕ್ಕಮಹಾದೇವಿ ವಧು-ವರಾನ್ವೇಷಣಾ ಕೇಂದ್ರದ 25ನೇ ವರ್ಷದ ರಜತ ಮಹೋತ್ಸವದ ಅಂಗವಾಗಿ ವಧು-ವರಾನ್ವೇಷಣೆ ಸಮಾವೇಶವು ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ನಡೆಯಲಿದೆ.

ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ನಿವೃತ್ತ ಪ್ರಸೂತಿ ತಜ್ಞರಾದ ಶ್ರೀಮತಿ ಡಾ. ಶಾಂತಾಭಟ್ ಉಪಸ್ಥಿತರಿರುವರು.

ಅಕ್ಕಮಹಾದೇವಿ ಸಮಾಜದ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ನೀಲಗುಂದ, ಕಾರ್ಯದರ್ಶಿ ಸುವರ್ಣಮ್ಮ ದೊಗ್ಗಳ್ಳಿ, ವಧು-ವರ ಅನ್ವೇಷಣಾ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ, ಕಾರ್ಯದರ್ಶಿ ಶ್ರೀಮತಿ ಶಾಂತಾ ಯಾವಗಲ್, ಸಹ ಕಾರ್ಯದರ್ಶಿ ಮಾಗಾನಹಳ್ಳಿ ರತ್ನಮ್ಮ ಮತ್ತು ಇತರರು ಉಪಸ್ಥಿತರಿರುವರು. ವಿವರಗಳಿಗಾಗಿ ಸಂಪರ್ಕಿಸಿ : 97401 06484, 97405 70332.

# ಕರ್ನಾಟಕ ಸರ್ಕಾರ ಮತ್ತು ಲಿವರ್ ಪೂಲ್ ವಿಶ್ವವಿದ್ಯಾಲಯಗಳ ನಡುವೆ ಮಹತ್ವದ ಒಡಂಬಡಿಕೆ

ಬೆಂಗಳೂರು, ಫೆ. 7 - ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಹೆಚ್ಚಿನ ಸಹಭಾಗಿತ್ವ ಉತ್ತೇಜಿಸುವಲ್ಲಿ ಕರ್ನಾಟಕ ಸರ್ಕಾರ ಮತ್ತು ಲಿವರ್ ಪೂಲ್ ವಿಶ್ವವಿದ್ಯಾಲಯಗಳ ನಡುವೆ ಇಂದಿಲ್ಲಿ ಮಹತ್ವದ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸಮ್ಮುಖದಲ್ಲಿ ಮುಖ್ಯಮಂತ್ರಿ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಒಡಂಬಡಿಕೆ ಏರ್ಪಟ್ಟಿತು.

ಬ್ರಿಟಿಷ್ ಡೆಪ್ಯುಟಿ ಹೈಕಮೀಷನ್‌ನ ಬ್ರಿಟಿಷ್ ಕೌನ್ಸಿಲ್ ವಿಭಾಗದ ನಿರ್ದೇಶಕ ಜನಕ ಪುಷ್ಪನಾಥನ್, ಕಾರ್ಯಕ್ರಮದ ಉಪಮುಖ್ಯಸ್ಥ ಜೇಮ್ಸ್ ಗೋಡ್ಬರ್, ಲಿವರ್ ಪೂಲ್ ವಿವಿ ಕುಲಪತಿ ಪ್ರೊ.ಟಿಎಮ್ ಜೋನ್ಸ್ ಮತ್ತು ಸಮ-ಕುಲಪತಿ ಪ್ರೊ.ತಾರಿಕ್ ಅಲಿ ಅಂಕಿತಕ್ಕೆ ಸಹಿ ಹಾಕಿದರು. ಆವಿಷ್ಕಾರ ಕಾರ್ಯಕ್ರಮಗಳು ಹಾಗೂ ಶಿಕ್ಷಣ ಸಹಕಾರಕ್ಕೆ ಸಂಬಂಧಿಸಿದ ಸಹಭಾಗಿತ್ವ ಸದೃಢಗೊಳಿಸುವ ಜೊತೆಗೆ ಉನ್ನತ ಸ್ಥರಕ್ಕೆ ಕೊಂಡೊಯ್ಯಲು ಜಂಟಿ ಕಾರ್ಯತಂಡ ರಚಿಸುವ ಗುರಿಯನ್ನೂ ಒಡಂಬಡಿಕೆ ಹೊಂದಿದೆ.

REQUIRED
For Euro Kids in Chitradurga
RECEPTIONIST
with Computer knowledge (Female)-1 post
Marketing Executive (Female)-1 post
Candidates with any degree can send their biodata to
Ph. : 86180 63304

WANTED TEACHERS
Well qualified teachers with experience, committed, enthusiastic and proficiency in English to teach.
Minimum 5 years of experience for Kannada, English, Hindi, Science, Mathematics, Social Science & Computer teacher. Nursery Teachers
Appointed candidates will be provided PF and Gratuity facility under certain terms & Conditions.
Apply within 10 Days (16th February 2025) Those interested kindly contact Administrator St. Paul's Central School, P.J. extension, Davangere.
M: 90351 10991, Office: 90194 36511
Gmail: stpaulscbse1920@gmail.com

# ದೊಡ್ಡೇರಿಯಲ್ಲಿ ಇಂದು ಜ್ಞಾನವಾಹಿನಿ ಸಂಸ್ಥೆಯ 25ನೇ ವರ್ಷದ ಸಂಭ್ರಮಾಚರಣೆ



ನ್ಯಾಮತಿ, ಫೆ.7- ತಾಲ್ಲೂಕಿನ ದೊಡ್ಡೇರಿಯ ಜ್ಞಾನವಾಹಿನಿ ಶಾಲಾ ಸಂಸ್ಥೆಯು ಪ್ರಾರಂಭವಾಗಿ 25 ವರ್ಷಗಳಾದ ಪ್ರಯುಕ್ತ ಫೆ.8ರ ಶನಿವಾರ ಸಂಜೆ 4.30ಕ್ಕೆ ಜ್ಞಾನವಾಹಿನಿ ಕಲಾಮಂದಿರದಲ್ಲಿ 25ನೇ ವರ್ಷದ ಸಂಭ್ರಮಾಚರಣೆ ನಡೆಯಲಿದೆ ಎಂದು ಶಾಲಾ ಕಾರ್ಯದರ್ಶಿ ಡಿ.ಎ. ರವಿಶಂಕರ್ ತಿಳಿಸಿದರು.

ದೊಡ್ಡೇರಿಯ ಜ್ಞಾನವಾಹಿನಿ ಶಾಲೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಭ್ರಮಾಚರಣೆಗೆ ಭಾರತ ಸರ್ಕಾರ ದೆಹಲಿಯ ಲೋಕಪಾಲ್ ಮತ್ತು ಹಿಮಾಚಲ ಪ್ರದೇಶದ ಮುಖ್ಯ ನ್ಯಾಯಾಧೀಶರಾದ ಎಲ್. ನಾರಾಯಣ ಸ್ವಾಮಿ ಆಗಮಿಸಲಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಗಮನದಲ್ಲಿರಿಸಿ ಕೊಂಡು ಶಾಲೆಯನ್ನು ಸಂಪೂರ್ಣ ಡಿಜಿಲೀಕರಣಗೊಳಿಸಿದ್ದು, ಡಿಜಿಲೀಕರಣವನ್ನು ಲೋಕಪಾಲ್ ಅವರು ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಲೋಕಪಾಲ್ ಅವರು, ಪೋಷಕರು ಮತ್ತು ಮಕ್ಕಳ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ತದನಂತರ ಅವರಿಗೆ ನಾಗರೀಕ ಸನ್ಮಾನ ಹಾಗೂ ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ.

ಶಾಸಕ ಡಿ.ಜಿ. ಶಾಂತನಗೌಡ, ದಾವಣಗೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶರಾದ ಎಚ್. ದೇವದಾಸ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಎಸ್. ಎನ್.ಪುಣ್ಯಕೋಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಟಿ. ನಿಂಗಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗೋಷ್ಠಿಯಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಎಚ್. ಹೇಮಾವತಿ, ಶಿಕ್ಷಣ ಸಂಯೋಜಕಿ ಎಸ್. ಜಿ. ಶಾಂತಾ, ವಿಶೇಷ ಸಂಪನ್ಮೂಲ ಅಧಿಕಾರಿ ಕೆ.ಎಂ. ಅಣ್ಣಪ್ಪ ಮತ್ತು ಶಾಲೆಯ ಸಿಬ್ಬಂದಿ ಇದ್ದರು.

# ಮುಡಾ : ಅರ್ಜಿ ಹೈಕೋರ್ಟ್‌ನಲ್ಲಿ ತಿರಸ್ಕೃತ

**(1ನೇ ಪುಟದಿಂದ)** ಅಸ್ತಿತ್ವದಲ್ಲೇ ಇಲ್ಲದ ಜಮೀನಿನ ಭೂ ಪರಿವರ್ತನೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು.

ಸಚಿವ ಸಂಪುಟ ಟಿಪ್ಪಣಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿಯೂ ಸಿದ್ದರಾಮಯ್ಯ ಅವರ ಪತ್ನಿಗೆ ಅನುಕೂಲವಾಗುವಂತೆ ಇದೆ, ಅಲ್ಲದೆ, ನಿಯಮಗಳನ್ನು ಗಾಳಿಗೆ ತೂರಿ ತಮಗಿಷ್ಟ ಬಂದಂತೆ ತಿರುಚಲಾಗಿದೆ ಎಂದು ಆರೋಪಿಸಲಾಗಿತ್ತು.

ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿರುವ ಈ ಮೊಕದ್ದಮೆಯಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ಲೋಕಾಯುಕ್ತ ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ, ಆರೋಪಿ ಮುಖ್ಯಮಂತ್ರಿ ಎಂಬ ಒಂದೇ ಕಾರಣಕ್ಕೆ ಸಿಬಿಐ ಅಥವಾ ಸ್ವತಂತ್ರ ತನಿಖೆಗೆ ಸುಪ್ರೀಂಕೋರ್ಟ್ ಆದೇಶಿಸಿರುವ ಉದಾಹರಣೆಗಳಿವೆ ಎಂಬ ವಾದ ಮಂಡಿಸಿದ್ದರು.

ಮುಖ್ಯಮಂತ್ರಿಗಳ ರಕ್ಷಣೆಗೆ ಇಡೀ ಸಚಿವ ಸಂಪುಟವೇ ಒಂದಾಗಿರುವಾಗ ಸ್ಥಳೀಯ ಲೋಕಾಯುಕ್ತ ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲದ ಕಾರಣ ನ್ಯಾಯ ಎತ್ತಿಹಿಡಿಯಲು ಸ್ವತಂತ್ರ ಹಾಗೂ ನ್ಯಾಯಸಮ್ಮತ ಸಂಸ್ಥೆಯಿಂದ ತನಿಖೆ ಅನಿವಾರ್ಯ ಎಂಬುದಾಗಿ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದ್ದರು.

ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಪರ ವಕೀಲರು ತಮ್ಮ ವಾದದಲ್ಲಿ, ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಹಿಡಿತದಲ್ಲಿದ್ದಾರೆ. ಎನ್ನುವುದಾದರೆ, ಸಿಬಿಐ ಸಹಾ ಕೇಂದ್ರ ಸರ್ಕಾರದ ಅಧೀನದಲ್ಲಿದೆ, ಆದ್ದರಿಂದ ಸ್ವತಂತ್ರ ತನಿಖಾ ಸಂಸ್ಥೆ ಎನ್ನಲಾಗುವುದಿಲ್ಲ.

ಲೋಕಾಯುಕ್ತ ಕಳಂಕಿತ ಎಂಬುದಾಗಿ ಹೇಳಲಾಗದು, ಲೋಕಾಯುಕ್ತ ಪೊಲೀಸರ ಮೇಲೆ ಲೋಕಾಯುಕ್ತ ಸಂಸ್ಥೆ ನಿಗಾ ಇರುತ್ತದೆ, ಆದ್ದರಿಂದ ಲೋಕಾಯುಕ್ತ ತನಿಖೆ ಸ್ವತಂತ್ರವಾಗಿರಲಿದೆ.

ಸಿಬಿಐ ಸ್ವತಂತ್ರ ಸಂಸ್ಥೆ ಎನ್ನುವುದಾದರೆ ಲೋಕಾಯುಕ್ತ ಸಹ ಸ್ವತಂತ್ರ ಸಂಸ್ಥೆಯಾಗಿದೆ, ಪ್ರಸ್ತುತ ನಡೆಸುತ್ತಿರುವ ತನಿಖೆಯೂ ಸೂಕ್ತವಾಗೇ ಇದೆ, ತನಿಖೆ ತಾರತಮ್ಯವಾಗಿದ್ದಾಗ ಮಾತ್ರ ಬೇರೆ ಸಂಸ್ಥೆಯಿಂದ ತನಿಖೆಗೆ ಮನವಿ ಮಾಡಬಹುದು.

ಲೋಕಾಯುಕ್ತ ಪೊಲೀಸರ ಅಂತಿಮ ವರದಿ ನಂತರ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ, ಇದಕ್ಕೂ ಮುನ್ನವೇ ತೀರ್ಮಾನಿಸಲು ಅವಕಾಶವಿಲ್ಲ, ಅಂತಿಮ ವರದಿಯಲ್ಲಿ ಲೋಪವಿದ್ದರೆ ಮರು ತನಿಖೆ ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದ್ದು ವರದಿಯಲ್ಲಿ ಏನಿದೆಯೆಂದು ತಿಳಿಯದೇ, ವಾದ ಆಲಿಸದೇ ತೀರ್ಮಾನಿಸಬಾರದು.

ಸಿಬಿಐ ತನಿಖೆಗೆ ಅರ್ಹವೆನ್ನಲು ಇದು ಅಪರೂಪದ ಪ್ರಕರಣವಲ್ಲ, ಲೋಕಾಯುಕ್ತ ತನಿಖೆಯಲ್ಲಿ ಮಧ್ಯಪ್ರವೇಶಿಸುವುದು ಸರಿಯಲ್ಲ, ದೂರುದಾರರಿಗೆ ರಾಜ್ಯಪಾಲರ ಅನುಮತಿ ಬೇಕಿತ್ತು ಪಡೆದುಕೊಂಡರು.

ಅರ್ಜಿದಾರರು ಮೊದಲು ಲೋಕಾಯುಕ್ತ ಪೊಲೀಸರ ತನಿಖೆ ಕೋರಿ, ತನಿಖೆಗೆ ಮೊದಲೇ ಸಿಬಿಐಗೆ ನೀಡುವಂತೆ ಕೇಳುತ್ತಿದ್ದಾರೆ, ಆದರೆ, ಲೋಕಾಯುಕ್ತ ಪೊಲೀಸ್ ತನಿಖೆಯಲ್ಲಿನ ಲೋಪ ಏನೆಂದು ತಿಳಿಸಿಲ್ಲ, ಆರೋಪಿ ಸ್ಥಾನದಲ್ಲಿ ಮುಖ್ಯಮಂತ್ರಿ ಇದ್ದಾರೆ ಎಂಬ ಮಾತ್ರಕ್ಕೆ ಸಿಬಿಐ ತನಿಖೆ ಕೇಳುತ್ತಿದ್ದಾರೆ, ಇದು ತಪ್ಪು ಮೇಲ್ಪಂಕ್ತಿಗೆ ನಾಂದಿಯಾಗುತ್ತದೆ ಎಂದು ಸಿದ್ದರಾಮಯ್ಯ ಪರ ವಕೀಲರು ವಾದ ಮಂಡಿಸಿದ್ದರು.

ತೀರ್ಪು ಕುರಿತು ಪ್ರತಿಕ್ರಿಯಿಸಿದ ದೂರುದಾರ ಸ್ನೇಹಮಯಿ ಕೃಷ್ಣ, ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಮೂಲಕ ಕಾನೂನು ಹೋರಾಟ ಮುಂದುವರಿಸುತ್ತೇವೆ, ತೀರ್ಪಿನ ಹೈಕೋರ್ಟ್ ಆದೇಶ ಪ್ರತಿ ದೊರೆತ ನಂತರ ಮೇಲ್ಮನವಿ ಸಲ್ಲಿಸಲಾಗುವುದು, ಲೋಕಾಯುಕ್ತ ತನಿಖೆ ಬಗ್ಗೆ ನಂಬಿಕೆ ಇಲ್ಲ ಎಂದರು.

ಲೋಕಾಯುಕ್ತ ಪೊಲೀಸರಿಂದ ಮುಡಾ ಹಗರಣದ ಸಮರ್ಪಕ ತನಿಖೆ ಸಾಧ್ಯವಿಲ್ಲ, ನ್ಯಾಯ ಸಿಗುವುದಿಲ್ಲ ಎಂದಿದ್ದ ಸ್ನೇಹಮಯಿ ಕೃಷ್ಣ, ಸಿಬಿಐ ತನಿಖೆ ಆದೇಶ ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

## ಹರಿಹರದಿಂದ ರಾಣೇಬೆನ್ನೂರಿಗೆ ಸಿದ್ದಾರೂಢರ ಜ್ಯೋತಿ ರಥಯಾತ್ರೆ



ಹುಬ್ಬಳ್ಳಿಯ ಜಗದ್ಗುರು ಶ್ರೀ ಸಿದ್ದಾರೂಢರ 190ನೇ ಜಯಂತಿ, ಶ್ರೀ ಗುರುನಾಥಾ ರೂಢರ 115ನೇ ಜಯಂತಿ ಹಾಗೂ ಸಿದ್ದಾರೂಢರ ಕಥಾಮೃತದ ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಜ್ಯೋತಿ ರಥ ಯಾತ್ರೆಯು ನಾಳೆ ಭಾನುವಾರ ರಾಣೇಬೆನ್ನೂರು ತಾಲ್ಲೂಕಿಗೆ ಆಗಮಿಸಲಿದ್ದು, ಸಿದ್ದಾರೂಢ ಸ್ವಾಮಿಯ ಭಕ್ತರು ಭಾಗವಹಿಸುವಂತೆ ಧರ್ಮದರ್ಶಿ ಸಿದ್ದನಗೌಡ ಮನವಿ ಮಾಡಿದ್ದಾರೆ.

ಇಂದು ಹರಿಹರದ ಬ್ರಹ್ಮಾನಂದ ಮಠದಿಂದ ಹೊರಟು, ಅಲ್ಲಿನ ಐರಣಿ ಹೊಳೆ ಮಠದಲ್ಲಿ ಪೂಜೆಗೊಂಡು ನಾಳೆ ಭಾನುವಾರ ರಾಣೇಬೆನ್ನೂರು ತಾಲ್ಲೂಕಿನ ಕವಲೆತ್ತು ಗ್ರಾಮದ ಸಿದ್ದಾರೂಢ ಮಠಕ್ಕೆ ಆಗಮಿಸಲಿದೆ. ಮಾಕನೂರು, ನಾಗೇನಹಳ್ಳಿ, ಮುದೇನೂರು, ಒಡೇರಾಯನಹಳ್ಳಿ, ಹಿರೇಬಿದರಿ ಮೂಲಕ ಐರಣಿ ಹೊಳೆಮಠದಲ್ಲಿ ವಾಸ್ತವ್ಯ ಹೂಡಲಿದೆ.

ದಿನಾಂಕ 10 ರ ಸೋಮವಾರ ಖಂಡೇರಾಯನಹಳ್ಳಿ, ಕರೂರು, ಚಳಗೇರಿ, ಮಣಕೂರು, ಇಟಗಿ, ಮಾಗೋಡ ಗ್ರಾಮಗಳ ಮೂಲಕ ಹಾಯ್ದು ರಾಣೇಬೆನ್ನೂರು ನಗರದ ಶ್ರೀ ಸಿದ್ದಾರೂಢ ಮಠಕ್ಕೆ ಆಗಮಿಸುವುದು. ಮಧ್ಯಾಹ್ನ 2 ಗಂಟೆಗೆ ನಗರದಲ್ಲಿ ಮೆರವಣಿಗೆ ಮೂಲಕ ಬೆನಕನಕೊಂಡ ಗ್ರಾಮದ ಶ್ರೀ ಸಿದ್ದಾಶ್ರಮಕ್ಕೆ ತೆರಳಲಿದೆ.

## ವಿದೇಶಿ ಜೈಲುಗಳಲ್ಲಿ 10 ಸಾವಿರಕ್ಕೂ ಹೆಚ್ಚು ಭಾರತೀಯರು

ನವದೆಹಲಿ, ಫೆ. 7 - ವಿದೇಶಿ ಜೈಲುಗಳಲ್ಲಿ ಭಾರತದ 10,152 ಜನ ಇದ್ದಾರೆ ಎಂಬ ಮಾಹಿತಿ ದೊರೆತಿರುವುದಾಗಿ ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ. ಒಟ್ಟು 86 ದೇಶಗಳಲ್ಲಿ ಭಾರತೀಯರು ವಿಚಾರಣಾಧೀನ ಇಲ್ಲವೇ ಬಂಧಿತರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ತಿಳಿಸಿದ್ದಾರೆ.

## 12ಕ್ಕೆ ಹರಿಹರೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ



ಹರಿಹರ ಕ್ಷೇತ್ರ ಪಾಲಕ ಹರಿಹರೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವು ಇದೇ ದಿನಾಂಕ 12ಕ್ಕೆ ಜರುಗಲಿದ್ದು, ರಥೋತ್ಸವ ನಿಮಿತ್ಯ ಈಗಾಗಲೇ ವಿವಿಧ ಪೂಜಾ ಪದ್ಧತಿಗಳು ಆರಂಭವಾಗಿವೆ.

ಇಂದಿನಿಂದ ಇದೇ ದಿನಾಂಕ 13ರ ವರೆಗೆ ಕ್ಷೇತ್ರದ ಪರಂಪರೆಯ ಪ್ರಕಾರ ಪೂಜೆಗಳು ನಡೆಯಲಿದ್ದು, ಫೆ.12ರ ಬುಧವಾರ ಬೆಳಗ್ಗೆ 10.25ಕ್ಕೆ ಮೇಷ ಲಗ್ನದಲ್ಲಿ ಸ್ವಾಮಿಯ ಬ್ರಹ್ಮ ರಥೋತ್ಸವ ನಡೆಯುತ್ತದೆ.

ಇಂದು ಬೆಳಿಗ್ಗೆ ಗಣಪತಿ ಪೂಜೆ, ರುದ್ರಾಭಿಷೇಕ, ಅಲಂ ಕಾರ, ಸ್ಥಾಪಿತ ದೇವತಾ ಪೂಜಾ, ಜಪ-ಹೋಮ ಮತ್ತು ಬಲಿ ದಾನ ಇತ್ಯಾದಿಗಳು ಇದೇ ದಿನಾಂಕ 13ರ ವರೆಗೆ ನಡೆಯಲಿವೆ. ಇಂದು ಸಂಜೆ ಪಂಚೋಪಚಾರ ಪೂಜೆ, ಬಲಿದಾನ 'ಗರುಡೋತ್ಸವ' ಮತ್ತು ನಿತ್ಯ ಸೇವಾದಿಗಳು ನಡೆಯಲಿವೆ.

ನಾಳೆ ಭಾನುವಾರ ಸಂಜೆ ಪಂಚೋಪಚಾರ ಪೂಜೆ, ಬಲಿ ದಾನ 'ಹನುಮೋತ್ಸವ', ಫೆ.10ರ ಸಾಯಂಕಾಲ ಪಂಚೋಪ ಚಾರ ಪೂಜಾ, ಬಲಿದಾನ 'ಅಶ್ವೋತ್ಸವ' ನಡೆಯಲಿದೆ. ರಾತ್ರಿ 8.35ಕ್ಕೆ 'ಹರಿಹರೇಶ್ವರ ಸ್ವಾಮಿಯ ಕಲ್ಯಾಣೋತ್ಸವ' ಮಂತ್ರ ಪುಷ್ಪ, ಮಹಾಮಂಗಳಾರತಿ ನಡೆಯಲಿದೆ.

ಫೆ.11ರ ಮಂಗಳವಾರ ಸಂಜೆ 'ಗಜೋತ್ಸವ' ನಡೆಯಲಿದೆ. ಫೆ.13ರ ಗುರುವಾರ ಗಣಪತಿ ಪೂಜಾ, ರುದ್ರಾಭಿಷೇಕ, ಕಂಕಣ ವಿಸರ್ಜನೆ, ಧ್ವಜಾ ವಿಸರ್ಜನೆ, ಅವಭೃತ ಸ್ನಾನಗಳೊಂದಿಗೆ ಉತ್ಸವಾದಿಗಳು ಪೂರ್ಣಗೊಳ್ಳಲಿವೆ. ಅದೇ ದಿನ ಸಂಜೆ 6ಕ್ಕೆ ನಟರಾಜ ನಾಟ್ಯ ಕೇಂದ್ರದ ಕಲಾವಿದರಿಂದ 'ಭರತ ನಾಟ್ಯ ಕಾರ್ಯಕ್ರಮ' ಹರಿಹರದ ಶ್ರೀನಿಧಿ ಅವರಿಂದ 'ವೀಣಾ ವಾದನ' ನಡೆಯಲಿದೆ.

## ಬಡ್ಡಿ ದರ 0.25ರಷ್ಟು ಕಡಿತ

**(1ನೇ ಪುಟದಿಂದ)** ಬಡ್ಡಿ ದರವನ್ನು 25 ಮೂಲ ಅಂಕಗಳಷ್ಟು ಇಳಿಸಲು ತೀರ್ಮಾನಿಸಲಾಗಿದೆ ಎಂದು ಮಲ್ಹೋತ್ರ ಹೇಳಿದ್ದಾರೆ.

ವಾಣಿಜ್ಯ ಬ್ಯಾಂಕುಗಳಿಗೆ ಹಣದ ಕೊರತೆಯಾದಾಗ ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆಯುವುದಕ್ಕೆ ವಿಧಿಸಲಾಗುವ ಬಡ್ಡಿ ದರವನ್ನು ರೆಪೋ ಎಂದು ಕರೆಯಲಾಗುತ್ತದೆ. ರೆಪೋ ದರ ಕಡಿಮೆಯಾದಾಗ ಬಡ್ಡಿ ದರ ಸಹ ಕಡಿಮೆಯಾಗುತ್ತದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಮಂಡಿಸಿದ ಬಜೆಟ್‌ನಲ್ಲಿ 12 ಲಕ್ಷ ರೂ.ಗಳವರೆಗೆ ಆದಾಯ ತೆರಿಗೆ ವಿನಾಯಿತಿ ನೀಡಲಾಗಿತ್ತು. ಇದರ ಬೆನ್ನಲ್ಲೇ ಬಡ್ಡಿ ದರ ಕಡಿತ ಮಧ್ಯಮ ವರ್ಗದವರಿಗೆ ಮತ್ತಷ್ಟು ಸಮಾಧಾನ ನೀಡಲಿದೆ.

ಮೇ 2022ರ ನಂತರ ರಿಸರ್ವ್ ಬ್ಯಾಂಕ್ ಸತತವಾಗಿ ಬಡ್ಡಿ ದರಗಳನ್ನು ಏರಿಸುತ್ತಾ ಬಂದಿತ್ತು. 250 ಮೂಲ ಅಂಕಗಳಷ್ಟು ಬಡ್ಡಿದರ ಏರಿಕೆ ಮಾಡಲಾಗಿತ್ತು. ಏಪ್ರಿಲ್ 2023ರಲ್ಲಿ ಬಡ್ಡಿ ದರ ಏರಿಕೆ ಪ್ರಕ್ರಿಯೆಗೆ ತಡೆ ಹಾಕಲಾಗಿತ್ತು.

ಬಜೆಟ್ ಮಂಡನೆಯ ನಂತರ ಮಾತನಾಡಿದ್ದ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್, ಬಡ್ಡಿ ದರ ಕಡಿತದ ಪರ ನಿಲುವು ತಳೆದಿದ್ದರು. ಹಣಕಾಸು ಹಾಗೂ ವಿತ್ತೀಯ ನೀತಿಗಳು ಒಂದೇ ದಾರಿಯಲ್ಲಿ ನಡೆಯಬೇಕು ಎಂದವರು ಹೇಳಿದ್ದರು.

ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಅವರು ಮಾತನಾಡಿ, ಸರ್ಕಾರ ವಿತ್ತೀಯ ಕೊರತೆಯನ್ನು ಕಡಿಮೆ ಮಟ್ಟದಲ್ಲಿ ಇರಿಸಿದೆ. ಹಣದುಬ್ಬರ ರಹಿತವಾದ ಬಜೆಟ್ ಮಂಡಿಸಿದೆ. ರಿಸರ್ವ್ ಬ್ಯಾಂಕ್ ಸಹ ಇದೇ ರೀತಿ ಹಣಕಾಸು ನೀತಿ ಹೊಂದಲಿದೆ ಎಂದು ಆಶಾಭಾವನೆ ವ್ಯಕ್ತಪಡಿಸಿದ್ದರು.

## ಸೈಕಲ್ ಸಂಚಾರಿ ರಮೇಶ್ ಪೂಜಾಗೆ ಸನ್ಮಾನ



ದಾವಣಗೆರೆ, ಫೆ.7- ಬೆಳಗಾವಿ ಜಿಲ್ಲೆ ಸಂಕೇಶ್ವರ ಪಟ್ಟಣದಿಂದ ಕಡೂರಿನ ದುರ್ಗಾ ಪರಮೇಶ್ವರಿ ದೇವಸ್ಥಾನಕ್ಕೆ ಸೈಕಲ್ ಮೂಲಕ ಏಕಾಂಗಿಯಾಗಿ ಪ್ರಯಾಣಿಸಿ, ಹಿಂದಿರುತ್ತಿದ್ದ ರಮೇಶ್ ಪೂಜಾ ಅವರಿಗೆ ನಗರದಲ್ಲಿ ಎಸ್.ಎಸ್ ಫಿಟ್ನೆಸ್ ಯೋಗ ಮತ್ತು ಸ್ಪೋರ್ಟ್ಸ್ ಸೆಂಟರ್ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಈ ವೇಳೆ ಬೈಸಿಕಲ್ ಕ್ಲಬ್ ಅಧ್ಯಕ್ಷ ರಾಜೇಂದ್ರ ಪ್ರಸಾದ್, ಕಾರ್ಯದರ್ಶಿ ಮಹೇಶ್, ಸಂಘದ ಸದಸ್ಯ ಕಿರಣ್, ಅಮರನಾಥ ಸೇರಿದಂತೆ ಇತರರು ಮುಂದಿನ ಪ್ರಯಾಣಕ್ಕೆ ಶುಭ ಕೋರಿ ಫಲಹಾರ ನೀಡಿದರು.

## ಸರಳ ಮದುವೆಯಾದ ಅದಾನಿ ಪುತ್ರ

**(1ನೇ ಪುಟದಿಂದ)** ಹಲವಾರು ಸಾಮಾಜಿಕ ಉದ್ದೇಶಗಳಿಗಾಗಿ ಅದಾನಿ 10,000 ಕೋಟಿ ರೂ.ಗಳನ್ನು ದಾನ ಮಾಡಲು ನಿರ್ಧರಿಸಿದ್ದಾರೆ ಎಂದು ಅವರ ನಿಕಟವರ್ತಿ ಮೂಲಗಳು ತಿಳಿಸಿವೆ.

ಈ ಹಣದಿಂದ ವಿಶ್ವ ದರ್ಜೆಯ ಆಸ್ಪತ್ರೆಗಳನ್ನು ಹಾಗೂ ವೈದ್ಯಕೀಯ ಕಾಲೇಜುಗಳನ್ನು ನಿರ್ಮಿಸಿ ಕಡಿಮೆ ವೆಚ್ಚದಲ್ಲಿ ಸೇವೆ ನೀಡಲಾಗುವುದು. ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡುವ ಶಾಲೆಗಳನ್ನು ಆರಂಭಿಸಲಾಗುವುದು ಹಾಗೂ ಉದ್ಯೋಗದ ಖಾತ್ರಿ ನೀಡುವ ಜಾಗತಿಕ ಹಂತದ ಕೌಶಲ್ಯದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು ಎಂದು ಮೂಲಗಳು ಹೇಳಿವೆ.

ಜೀತ್ ಅವರು ಅದಾನಿ ಏರ್‌ಪೋರ್ಟ್ ನಿರ್ದೇಶಕರಾಗಿದ್ದಾರೆ. ಈ ಸಂಸ್ಥೆಯು ವಿಮಾನ ನಿಲ್ದಾಣದ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇಂಜಿನಿಯರಿಂಗ್ ಪದವೀಧರರಾಗಿರುವ ಅವರು 2019ರಲ್ಲಿ ಅದಾನಿ ಸಮೂಹಕ್ಕೆ ಸೇರಿದ್ದರು.

ದಿವಾ ಷಾ ಅವರು ವಜ್ರದ ಉದ್ಯಮಿ ಜೈಮಿನ್ ಷಾ ಅವರ ಪುತ್ರಿಯಾಗಿದ್ದಾರೆ. ಅವರು ಸಿ ದಿನೇಶ್ ಅಂಡ್ ಕೋ ಕಂಪನಿಯ ಸಹ ಮಾಲೀಕತ್ವ ಹೊಂದಿದ್ದಾರೆ.

## ಮಾರ್ಗ ಅಸ್ತ್ರವಾಗಿ ಬಳಕೆ : ಧನಕರ್ ಕಳವಳ

**(1ನೇ ಪುಟದಿಂದ)** ಸಾಂಸ್ಕೃತಿಕ ಪರಂಪರೆಯನ್ನು ಕಡೆಗಣಿಸುವ ಯತ್ನ ನಡೆಸಿವೆ. ಇಂತಹ ಶಕ್ತಿಗಳಿಗೆ ಪ್ರಬಲವಾದ ಪ್ರತಿಕ್ರಿಯೆ ನೀಡಬೇಕು ಎಂದವರು ಕರೆ ನೀಡಿದರು.

ಭಾರತದ ಆರ್ಥಿಕ ಬೆಳವಣಿಗೆ ಕುರಿತು ಮಾತನಾಡಿದ ಅವರು, ಐಎಂಎಫ್, ವಿಶ್ವ ಬ್ಯಾಂಕ್ ಮತ್ತಿತರರು ಭಾರತವನ್ನು ಮಿನುಗು ತಾರೆಯಾಗಿ ನೋಡುತ್ತಿದ್ದಾರೆ. ಭಾರತವು ಹೂಡಿಕೆ, ಅವಕಾಶ ಹಾಗೂ ಪ್ರತಿಭೆಯ ತಾಣ ಎಂದು ಗುರುತಿಸಲಾಗುತ್ತಿದೆ. ಹೂಡಿಕೆ ಹಾಗೂ ಅವಕಾಶಗಳಿಗೆ ಭಾರತ ಜಾಗತಿಕ ತಾಣವಾಗಿದೆ ಎಂದವರು ತಿಳಿಸಿದರು.

ಕರ್ನಾಟಕದ ಸಂಸ್ಕೃತಿ ಭಾರತದ ಸಂಸ್ಕೃತಿಯಲ್ಲಿ ಅಂತರವಿಲ್ಲ. ಇಲ್ಲಿನ ಸಂಸ್ಕೃತಿಯ ವೈಭವ ಹೆಚ್ಚಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಅತಿಥಿಯಾಗಿ ಪಾಲ್ಗೊಂಡಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಆಶಯ ಭಾಷಣ ಮಾಡಿದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮಾತನಾಡಿ, ಇಂದು ದೇಶಾದ್ಯಂತ ಭಿನ್ನತೆ, ನಾವೆಲ್ಲಾ ಭಿನ್ನರು, ಪ್ರಾದೇಶಿಕತೆ ಇದೆ, ಸಮಾನತೆ ಇಲ್ಲ ಎನ್ನುವ ಖಿನ್ನತೆಯ ಭಾವನೆಗಳನ್ನು ಹುಟ್ಟುಹಾಕುವ ಪ್ರಯತ್ನ ನಡೆದಿದೆ. ಇಲ್ಲಿ ಭಿನ್ನತೆ ಇಲ್ಲ, ಈ ಕಾರ್ಯಕ್ರಮಗಳಿಂದ ನಾವೆಲ್ಲ ಒಂದು ಎನ್ನುವುದನ್ನು ಸಾಬೀತು ಪಡಿಸುತ್ತಿದ್ದೇವೆ ಎಂದು ಹೇಳಿ, ನಮ್ಮ ಕಲೆ, ಸಂಸ್ಕೃತಿ, ಭಕ್ತಿ ಇದೆಲ್ಲವು ನಮ್ಮ ಜೀವನದ ದರ್ಶನ. ಇದನ್ನು ಶ್ರೀಮಂತಗೊಳಿಸುವಲ್ಲಿ ನಾವು ಸದಾ ಸನ್ನದ್ಧರಾಗಿರುತ್ತೇವೆ ಎಂದರು.

ವೇದಿಕೆಯಲ್ಲಿ ಹರಿಹರ ಪಂಚಮಸಾಲಿ ಪೀಠದ ಅಧ್ಯಕ್ಷ ವಚನಾನಂದ ಶ್ರೀಗಳು, ಉಪ ರಾಷ್ಟ್ರಪತಿಗಳ ಶ್ರೀಮತಿ ಡಾ. ಸುದೇಷ್ಣಾ ಧನಕರ್, ಮೈಸೂರು ಮುಕ್ತ ವಿವಿಯ ಕುಲಪತಿ ಪ್ರೊ. ಎಸ್.ವಿ. ಹಲಸೆ, ಪ್ರಜ್ಞಾ ಪ್ರವಾಹದ ಸಂಯೋಜಕ ರಘುನಂದನ ಸಂಯೋಜಕ ಕೆ. ಎನ್. ಪಾಟೀಲ ಹಾಗೂ ಸಚಿವ ಮಂಕಾಳ ವೈದ್ಯ ಉಪಸ್ಥಿತರಿದ್ದರು.

ಉಪರಾಷ್ಟ್ರಪತಿ, ರಾಜ್ಯಪಾಲರಿಗೆ ಇಲ್ಲಿನ ಉತ್ಕೃಷ್ಟ ಉಣ್ಣೆಯ ಕಂಬಳಿಗಳನ್ನು ಹೊದಿಸಿ, ಏಲಕ್ಕಿ ಮಾಲೆಗಳಿಂದ ಗೌರವಿಸಲಾಯಿತು. ಉಪರಾಷ್ಟ್ರಪತಿಗಳ ಶ್ರೀಮತಿಗೆ ರೇಷ್ಮೆ ಸೀರೆ ಹಾಗೂ ಏಲಕ್ಕಿ ಮಾಲೆ ಹಾಕಿ ಗೌರವಿಸಲಾಯಿತು.

## ರಾಮಮಂದಿರಕ್ಕೆ ಮೊದಲ ಇಟ್ಟಿಗೆ ಇರಿಸಿದ್ದ ವಿ.ಹೆಚ್.ಪಿ. ನಾಯಕ ಚೌಪಾಲ್ ನಿಧನ



ಅಯೋಧ್ಯೆ, ಫೆ. 7 - 1989ರಲ್ಲಿ ನಡೆದ ಸಮಾರಂಭದಲ್ಲಿ ಅಯೋಧ್ಯೆ ರಾಮ ಮಂದಿರಕ್ಕೆ ಮೊದಲ ಇಟ್ಟಿಗೆ ಇರಿಸಿದ್ದ ವಿ.ಹೆಚ್.ಪಿ. ನಾಯಕ ರಾಮೇಶ್ವರ ಚೌಪಾಲ್ ನಿಧನರಾಗಿದ್ದಾರೆ.

ಸುದೀರ್ಘ ಕಾಲದಿಂದ ಅಸ್ವಸ್ಥರಾಗಿದ್ದ ಅವರು ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ರಾಮಮಂದಿರ ಟ್ರಸ್ಟ್ ಸದಸ್ಯ ಸಹ ಆಗಿದ್ದ ಚೌಪಾಲ್ ಪಾಟ್ನಾ ಮೂಲದವರಾಗಿದ್ದಾರೆ. 1989ರಲ್ಲಿ ರಾಮ ದೇವಾಲಯಕ್ಕೆ ಅಡಿಪಾಯ ನೆರವೇರಿಸುವ ಸಮಾರಂಭದಲ್ಲಿ ಅವರು ಮೊದಲೇ ಇಟ್ಟಿಗೆ ಇರಿಸಿದ್ದರು. ಚೌಪಾಲ್ ಅವರು ಮೊದಲ ಕರಸೇವಕ ಎಂದು ಆರ್.ಎಸ್.ಎಸ್. ಬಿರುದು ನೀಡಿತ್ತು.

## 8,800 ಕೋಟಿ ರೂ.ಗಳ ಸ್ಕಿಲ್ ಇಂಡಿಯಾ ಯೋಜನೆಗೆ ಸಂಪುಟದ ಒಪ್ಪಿಗೆ

ನವದೆಹಲಿ, ಫೆ. 7 - ಸ್ಕಿಲ್ ಇಂಡಿಯಾ ಯೋಜನೆಯನ್ನು 2026 ರ ವರೆಗೆ ಮುಂದುವರೆಸುವ ಹಾಗೂ ಹೊಸ ಸ್ವರೂಪ ನೀಡುವ 8,800 ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಈ ವಿಷಯ ತಿಳಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸ್ಕಿಲ್ ಇಂಡಿಯಾ ಪ್ರೋಗ್ರಾಮ್ (ಎಸ್.ಐ.ಪಿ.) ಎಂಬ ಯೋಜನೆ ಜಾರಿಗೆ ತರಲಾಗುವುದು. ಇದರಲ್ಲಿ ಪ್ರಧಾನಮಂತ್ರಿ ಕೌಶಲ್ ವಿಕಾಸ ಯೋಜನೆ, ಪ್ರಧಾನಮಂತ್ರಿ ರಾಷ್ಟ್ರೀಯ ಶಿಷ್ಯವೇತನ ಯೋಜನೆ ಹಾಗೂ ಜನಶಿಕ್ಷಣ ಸಂಸ್ಥಾನ ಯೋಜನೆಗಳನ್ನು ವಿಲೀನಗೊಳಿಸಲಾಗುವುದು.

## ಬ್ಯಾಂಕೇತರ ಸಂಸ್ಥೆಗಳಿಗೆ ಪ್ರತ್ಯೇಕ ಡೊಮೇನ್

**(1ನೇ ಪುಟದಿಂದ)** ತಿಂಗಳಿನಿಂದ ಈ ಕ್ರಮ ಜಾರಿಗೆ ಬರಲಿದೆ. ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಬ್ಯಾಂಕುಗಳಿಗೆ ಪ್ರತ್ಯೇಕವಾದ ಡೊಮೇನ್ ಹೆಸರು ನೀಡಲು ನಿರ್ಧರಿಸಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರ ತಿಳಿಸಿದ್ದಾರೆ.

ರಿಸರ್ವ್ ಬ್ಯಾಂಕ್‌ನ ಈ ಕ್ರಮದಿಂದ ಫಿಶಿಂಗ್ ರೀತಿಯ ಸೈಬರ್ ಬೆದರಿಕೆಗಳನ್ನು ಎದುರಿಸಲು ನೆರವಾಗಲಿದೆ. ಐಡಿಆರ್‌ಬಿಟಿ ಸಂಸ್ಥೆಯು ಡೊಮೇನ್ ಹೆಸರುಗಳಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸಲಿದೆ.


KHB ಸೈಟ್ ಮಾರಾಟಕ್ಕೆ
ದಾವಣಗೆರೆಯಿಂದ ಮೊದಲ ಭಾಗದ ಟ್ಯಾಂಕ್ ಹತ್ತಿರ
30x40 ಸೌತ್ (33 ಲಕ್ಷ)
30x40 ಸೌತ್ (32.5 ಲಕ್ಷ)
ಕಿರಣ್ ಬೂಸ್ನೂರ್
94824 63409
(ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿ)

ಸೈಟುಗಳು ಮಾರಾಟಕ್ಕಿವೆ
ಕುಂದವಾಡ ರಸ್ತೆ ಬಾಲಾಜಿ ಸರ್ಕಲ್ ಹತ್ತಿರ ಡಾ. ಸರ್ಜನ್ ರಾಜ್ ಲೇಔಟ್ 30x40 ಉತ್ತರ ಎಸ್.ಎಸ್. 'ಎ' ಬ್ಲಾಕ್‌ನಲ್ಲಿ 30x50 ಪೂರ್ವ, ಶಿರಮಗೊಂಡನಹಳ್ಳಿ ರಸ್ತೆ, ವಿಶ್ವ ಚೇತನ ಸ್ಕೂಲ್ ಹಿಂಭಾಗ 30x45 ಉತ್ತರ, 60 ಅಡಿ ರಸ್ತೆಗೆ ಹೊಂದಿಕೊಂಡು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಬಾಡಿಗೆಗೆ
Old PB Road, Trends Man, Titan World Bldg, Covered Terrace - 3600 Sqft Basement-30x15 Godowns
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮೊದಲನೇ ಮಹಡಿ 3500 ಅಡಿಗಳು
94480 28103

AdBlue / DEF
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

2 BEDROOM HOUSE
Available for rent Near to Schools & Colleges in Taralabalu Badavane
94489 24389

ಬೇಕಾಗಿದ್ದಾರೆ
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

ಮಾರಾಟಕ್ಕಿದೆ
ಬಿ.ಟಿ.ಗಲ್ಲಿ ಕ್ರಾಸ್ ನಲ್ಲಿ ಕಮರ್ಷಿಯಲ್ ಎರಡು ಅಂಗಡಿ ಹಾಗೂ ಡೂಪ್ಲೆಕ್ಸ್ ಮನೆ ಇದೆ.
ಸಂಪರ್ಕಿಸಿ :
98448 03000

ಸೈಟ್ & ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್ 40x60 40 ಅಡಿ ರಸ್ತೆಗೆ ಪೂರ್ವ ದಿಕ್ಕು 3 ಸೈಟ್‌ಗಳು ಇವೆ. ಬನಶಂಕರಿಯಲ್ಲಿ 40x70 ಪಶ್ಚಿಮ 30x57 ಪೂರ್ವ ಸರ್ಕಾರಿ ನೌಕರರ ಬಡಾವಣೆಯಲ್ಲಿ 'ಬಿ' ಬ್ಲಾಕ್ 30x40 ಪೂರ್ವ 30x51 ಉತ್ತರ 30x50 ಉತ್ತರ ದಿಕ್ಕಿನ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ : ಪ್ರಾಪರ್ಟಿ ಅಡ್ವೈಸರ್, ಸುರೇಶ್ ಪಿ.ಎಸ್. ಶಾಮನೂರು
84314 00907

ಸೈಟ್ & ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ :
ಸಂತೆಬೆನ್ನೂರು ಹತ್ತಿರ 4 ಎಕರೆ ಖಾಲಿ ಹೊಲ & 4 1/2 ಅಡಿಕೆ ಗಿಡದ ತೋಟ 2 ವರ್ಷದ್ದು ಒಟ್ಟು 8 1/2 ಎಕರೆ ಜಮೀನು ಮಾರಾಟಕ್ಕೆ ಮಿಟ್ಲಕಟ್ಟೆಯಲ್ಲಿ 6 ಗುಂಟೆ ಜಾಗ CC ರಸ್ತೆಗೆ ಹೊಸ ಬಾತಿ & ಹಳೆ ಬಾತಿ ಮಧ್ಯ ಮೇನ್ ರೋಡ್‌ಗೆ 28+4 ಗುಂಟೆ ಜಾಗ ಇದೆ. ತ್ಯಾವಣಿಗಿಯಲ್ಲಿ 1 ಎಕರೆ CN9 &Dvg ರಸ್ತೆಗೆ ತ್ಯಾವಣಿಗಿಯಿಂದ 500 ಮೀ ದೂರದಲ್ಲಿ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ : ಪ್ರಾಪರ್ಟಿ ಅಡ್ವೈಸರ್ ಸುರೇಶ್ ಪಿ.ಎಸ್. ಶಾಮನೂರು
84314 00907

ಸೈಟ್ ಮಾರಾಟಕ್ಕಿದೆ
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

ಅಡಿಕೆ ತೋಟ ಮಾರಾಟಕ್ಕಿದೆ
ಫಸಲಿಗೆ ಬಂದಿರುವ ಎರಡೂವರೆ ಎಕರೆ, ಸ್ಟೇಟ್ ಹೈವೆ ರೋಡ್ ಸಮೀಪದಲ್ಲಿರುವ ತೋಟ ಮಾರಾಟಕ್ಕಿದೆ.
88612 84178

ಸೈಟು ಮಾರಾಟಕ್ಕಿದೆ
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ನುರಿತ ಹಾಗೂ ಅನುಭವವಿರುವ ಸೇಲ್ಸ್ ಗರ್ಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
G.J ಕಾಸ್ಮೆಟಿಕ್ಸ್ ಪ್ಯಾಲೇಸ್
(ಗೌಡ್ರ ಜಯದೇವಪ್ಪ) ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ.
ಫೋ. 9901969595

SITE FOR SALE
30x40 North Facing, Near Daivik Moti Layout, Jangama Layout, Dvg.
K.M. Chandraiah
83101 56049

ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ
ಶ್ರೀ ಶ್ರೀಧರ ಹೋಂ ಕೇರ್ ಸರ್ವೀಸ್‌ನಲ್ಲಿ ಆಫೀಸ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಅರ್ಹತೆಗಳು: ಯಾವುದೇ ಪದವಿ ಮತ್ತು ಕಂಪ್ಯೂಟರ್ ಜ್ಞಾನ ಅವಶ್ಯಕ.
9980503266, 7975012450

ಜಾಗ ಮಾರಾಟಕ್ಕಿದೆ
ಶಿರಮಗೊಂಡನಹಳ್ಳಿ ವ್ಯಾಪ್ತಿಗೆ ಬರುವ ನಗರ ಪ್ರದೇಶಕ್ಕೆ ಹೊಂದಿಕೊಂಡಿರುವಂತೆ 21.5 ಗುಂಟೆ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
77957 12332

ಮೊಬೈಲ್ ಶಾಪ್ ಮಾರಾಟಕ್ಕೆ ಲಭ್ಯವಿದೆ
ಸುಸಜ್ಜಿತವಾದ ಒಳ ವಿನ್ಯಾಸ ಹೊಂದಿರುವ ಮೊಬೈಲ್ ಅಂಗಡಿ ಮಾರಾಟಕ್ಕೆ ಇದೆ.
ಟೀ ಲಾಂಚ್ ಹತ್ತಿರ, MCC ಬಿ ಬ್ಲಾಕ್, ದಾವಣಗೆರೆ.
98521 23567

SITE FOR SALE
Banashankari Badavane 30x50 North Facing 40x43 North-East Corner, Vajapayee Badavane 40x43 North west Corner, Jayanagara 32x66 East near 50 Ft Road.
Guruprasad 85536 19616

ಕಾರ್ ಮಾರಾಟಕ್ಕಿದೆ
ಮಾರುತಿ ಸ್ವಿಫ್ಟ್ ಡಿಸೈರ್ ಕಾರ್
CNG+Petrol
22 Model ಮಾರಾಟಕ್ಕಿದೆ.
94812 47552

ಅಡಿಕೆ ತೋಟ ಮಾರಾಟಕ್ಕಿದೆ
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
95130 15544

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

CHANGE OF NAME
I Chandrashekar N.V. S/o N.K. Veeranna, aged about 45 years, R/o #2235/B, 'Parvathi Nilaya', 6th Main, 2nd Cross, M.C.C. A Block, Davangere Have changed my son name is Eshwar N.C. to Ishanth N.C. vide affidavit date 07.02.2025 sworn before Notary B.G. Revanasiddappa. Infuture all my son's transactions will be new name as Ishanth N.C.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ.ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ. ವಸತಿ ವ್ಯವಸ್ಥೆ ಇದೆ.
98450 35710

ಲಿಂಗಾಯತ ವಧು-ವರ
ವೀರಶೈವ ಲಿಂಗಾಯತ ಡಾಕ್ಟರ್ಸ್, ಇಂಜಿನಿಯರ್ಸ್, (ಸ್ವದೇಶಿ & ವಿದೇಶಿ) ಸರ್ಕಾರಿ ನೌಕರಿಯಲ್ಲಿರುವ IPS, IAS ಸ್ವಂತ ಬಿಜಿನೆಸ್ ಹೊಂದಿರುವ ಒಳ್ಳೆಯ ಮನೆತನದ ಸುಂದರ ವಧು-ವರರಿಗಾಗಿ ಸಂಪರ್ಕಿಸಿ :
98807 29108

ಸೈಟ್ ಮಾರಾಟಕ್ಕಿದೆ
ದಾವಣಗೆರೆ, ಸರಸ್ವತಿ ನಗರ, "ಸಿ" ಬ್ಲಾಕ್, ಜೀವನ್ ಭೀಮಾ ರಸ್ತೆಯಲ್ಲಿ ದಕ್ಷಿಣ ದಿಕ್ಕಿನ 40x60 ಅಳತೆಯ ಸೈಟ್ ಮಾರಾಟಕ್ಕಿದೆ.
ತಿಪ್ಪೇಸ್ವಾಮಿ
78999 11822, 81970 07801

ಡ್ರೈವರ್ ಬೇಕಾಗಿದ್ದಾರೆ
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

ಉದ್ಯೋಗಾವಕಾಶ
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್) ವಯೋವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ.ಸಂಬಳ 18,000 ರಿಂದ 25,000 ರೂ.ವರೆಗೆ ವಿದ್ಯಾರ್ಹತೆ : 7th, 10th, PUC, ANM, GNM
76193 54274

RENT
Shop (Malige) 12x10 feet for Commercial Purpose at P.J Ext, Chetana Hotel Road , 4th main, 7th cross Ground Floor. Contact.
9448590794 , 8073742133.

ಶ್ರೀ ಸಾಯಿ ಫೈನಾನ್ಸ್ (ರಿ)
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

TUITIONS
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

ಮನೆ ಮಾರಾಟಕ್ಕಿದೆ
7ನೇ ಮೇನ್, 2ನೇ ಕ್ರಾಸ್, LIG ಕ್ವಾರ್ಟರ್ಸ್, ವಿದ್ಯಾನಗರ, 60x21½ ಅಡಿಗಳು =1290 ಅಡಿಗಳು 1ನೇ ಮಹಡಿ, ಗ್ರೌಂಡ್ ಫ್ಲೋರ್ 14 ಚದುರ
ಕಾಳಾಚಾರ್-9844051414
ನರೇಂದ್ರ ಮೋದಿ-9632689119

ಮಳಿಗೆ ಬಾಡಿಗೆಗೆ ಇದೆ
ಇಂಡಸ್ಟ್ರೀಯಲ್ ಏರಿಯಾ (SAR ನಗರ), ಲೋಕಿಕೆರೆ ರಸ್ತೆ, ಸರ್ಕಲ್‌ನಲ್ಲಿ ವಾಣಿಜ್ಯ ಮಳಿಗೆಗಳು, 1ನೇ ಮಹಡಿಯಲ್ಲಿ 1000, 600 600 sqft 3 ಮಳಿಗೆಗಳು ಬಾಡಿಗೆಗೆ ಇವೆ.
9900939161, 7676477320

ಸೈಟುಗಳು ಮಾರಾಟಕ್ಕಿವೆ
ಎರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

FLAT FOR LEASE
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

## ಸಿದ್ದರಾಮಯ್ಯ ಸರ್ಕಾರದ ಮಹಿಳಾ ಪರ ಯೋಜನೆಗಳಿಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಧ್ಯಕ್ಷರ ಪ್ರಶಂಸೆ

ಬೆಂಗಳೂರು, ಫೆ.7 - ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಗೆ ಉತ್ತೇಜನ ನೀಡಲು ಮಹಿಳಾ ಪರ ಯೋಜನೆಗಳನ್ನು ಜಾರಿಗೆ ತಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಧ್ಯಕ್ಷ ಫಿಲೆಮನ್ ಯಾಂಗ್ ಅವರು ಪ್ರಶಂಸಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಮುಂದಿನ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶೋಗಾಥೆಯನ್ನು ಹಂಚಿಕೊಳ್ಳಲಾಗುವುದು ಎಂದು ಯಾಂಗ್ ತಿಳಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಕರ್ನಾಟಕ ಯಾವ ರೀತಿ ಉನ್ನತ ರಾಜ್ಯಗಳ ಪಟ್ಟಿಯಲ್ಲಿ ನಿರಂತರವಾಗಿ ಸ್ಥಾನ ಪಡೆದಿದೆ ಎಂಬ ಬಗ್ಗೆಯೂ ವಿವರ ಪಡೆದಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ. ಮಹಿಳೆಯರ ಕೇಂದ್ರೀಕೃತವಾಗಿ ರೂಪಿಸಲಾಗಿರುವ 5 ಗ್ಯಾರಂಟಿ ಯೋಜನೆಗಳ ಬಗ್ಗೆಯೂ ಯಾಂಗ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಲಾಗಿದೆ.

## ನಗರದಲ್ಲಿ ಇಂದು ಕೊಟ್ಟೂರು ಪಾದಯಾತ್ರೆ ಸರ್ವ ಭಕ್ತರ ಸಭೆ



ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ 46ನೇ ಕೊಟ್ಟೂರು ಪಾದಯಾತ್ರೆಯ ಸರ್ವ ಭಕ್ತರ ಸಭೆಯು ಇಂದು ಸಂಜೆ 5 ಗಂಟೆಗೆ ಶ್ರೀ ವಿರಕ್ತಮಠದ ಆವರಣದಲ್ಲಿ ನಡೆಯಲಿದೆ ಎಂದು ಪಾದಯಾತ್ರೆ ಟ್ರಸ್ಟ್‌ನ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

## ಇಂದಿನಿಂದ ಕೊಟ್ಟೂರೇಶ್ವರ ಸ್ವಾಮಿ ಪ್ರವಚನ

ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಭಕ್ತರು ಪಾದಯಾತ್ರೆ ಕೈಗೊಳ್ಳುವ ಮುನ್ನ ವಿರಕ್ತಮಠದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ-ಪ್ರವಚನ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ. ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದು, ಭಕ್ತರು ಪ್ರವಚನ ಭಾಗವಹಿಸಲು ಮುರುಗೇಶಪ್ಪ ಕೋರಿದ್ದಾರೆ.

## ನಗರದಲ್ಲಿ ನಾಳೆ ಧ್ಯಾನ ಕಾರ್ಯಾಗಾರ

ದಾವಣಗೆರೆ, ಫೆ. 7- ಬ್ರಹ್ಮಶ್ರೀ ಪಿತಾಮಹಾ ಸುಭಾಷ್ ಪ್ರತೀಜಿಯವರ ದಿವ್ಯ ಪ್ರೇರಣೆಯೊಂದಿಗೆ ನಾಡಿದ್ದು ದಿನಾಂಕ 9 ರಂದು ಬೆಳಿಗ್ಗೆ 9.30 ರಿಂದ ಸಂಜೆ 5 ರವರೆಗೆ ನಗರದ ನಿಜಲಿಂಗಪ್ಪ ಬಡಾವಣೆಯ ಶ್ರೀ ನಿಮಿಷಾಂಬ ಸಮುದಾಯ ಭವನದಲ್ಲಿ ಧ್ಯಾನ ಕಾರ್ಯಾಗಾರ ನಡೆಯಲಿದೆ ಎಂದು ಧ್ಯಾನ ಪ್ರಗತಿ ಪರಿಷತ್‌ನ ಶೇಖರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೊಸಪೇಟೆಯ ಕರ್ನಾಟಕ ಧ್ಯಾನ ಪ್ರಗತಿ ಪರಿಷತ್ತಿನ ರಾಜ್ಯಾಧ್ಯಕ್ಷ ಟಿ. ಹರಿಶಂಕರ್ ಧ್ಯಾನ ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿಯ ಮೂವ್‌ಮೆಂಟ್ ವತಿಯಿಂದ ಅನಾಪಾನ ಸತಿ ಧ್ಯಾನ ನಡೆಸಿಕೊಡುವರು.

ಶನಿವಾರ ಬಕ್ಕೇಶ್ವರ ಸ್ಕೂಲ್, ಧರಾಮ ವಿಜ್ಞಾನ ಕಾಲೇಜು ನಂತರ ತಿಮ್ಮಾರೆಡ್ಡಿ ಕಾಲೇಜಿನಲ್ಲಿ ಧ್ಯಾನ ಕಾರ್ಯಾಗಾರ ನಡೆಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರವಿಕುಮಾರ್, ಕರಿಬಸಪ್ಪ, ಬಕ್ಕೇಶ್, ಶ್ರೀನಿವಾಸ್ ಉಪಸ್ಥಿತರಿದ್ದರು.

# ಪ್ರಸಕ್ತ ದಿನಗಳಲ್ಲಿ ಸಾಹಿತ್ಯದ ಸವಾಲುಗಳು ಸ್ಥಿತ್ಯಂತರಗೊಂಡಿವೆ

## ‘ರಾಷ್ಟ್ರೀಯ ಅಕ್ಷರ ಹಬ್ಬ’ ಕಾರ್ಯಕ್ರಮದಲ್ಲಿ ರಾಜ್ಯ ಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ ಅಭಿಮತ



> ಜಾಗತೀಕರಣದ ನಂತರದ ಬೆಳವಣಿಗೆಗಳಿಂದ ಸಣ್ಣ ಸಮುದಾಯಗಳು ಸಾಯುತ್ತಿವೆ. ಬಹುತೇಕ ಭಾಷೆಗಳು ಪಥನವಾಗುತ್ತಿವೆ. ಭಾಷೆಯ ಸಾವಿಗೆ ಲೇಖಕ ಮುಖಾ-ಮುಖಿಯಾಗಿ ನಿಲ್ಲಬೇಕು. ಭಾಷೆಯ ಸಾವು ರಾಜ್ಯಗಳ ಸಾವೂ ಹೌದು.
> - ಪುರುಷೋತ್ತಮ ಬಿಳಿಮಲೆ
> ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ

> ಹರಿಯುವ ನೀರಿನಲ್ಲಿ ಮುಳುಗುವುದು ಮಾತ್ರ ಕುಂಭಮೇಳವಲ್ಲ. ದೇಶದ ಎಲ್ಲ ವೈವಿಧ್ಯಮಯ ಸಂಗತಿಗಳ ಸಂಗಮವೇ ಕುಂಭಮೇಳ.
> - ಡಾ.ಎಲ್. ಹನುಮಂತಯ್ಯ
> ಸಾಹಿತಿ ಹಾಗೂ ರಾಜ್ಯ ಸಭಾ ಸದಸ್ಯ

> ಯುವ ಪೀಳಿಗೆ ಅವಿವಾಹಿತರಾಗಿಯೇ ಉಳಿದಿದ್ದಾರೆ. ಸಂಗಾತಿ, ಪ್ರೀತಿ, ದೈಹಿಕ ಸಂಪರ್ಕ ಇಲ್ಲದ ಬದುಕು ಏನಾಗಬಹುದು. ಇಂತಹ ಸಂಗತಿಗಳನ್ನು ಲೇಖಕರು ಗಮನಿಸಬೇಕು.
> - ಹೆಚ್.ಎನ್. ಆರತಿ
> ಚಂದನ ವಾಹಿನಿ ನಿರ್ದೇಶಕರು

ದಾವಣಗೆರೆ, ಫೆ.7 - ಪ್ರಸಕ್ತ ದಿನಗಳಲ್ಲಿ ಸಾಹಿತ್ಯದ ಸವಾಲುಗಳು ಸ್ಥಿತ್ಯಂತರಗೊಂಡಿವೆ. ಲೇಖಕನೊಬ್ಬ ಯಾವ ಪ್ರಶ್ನೆಗಳನ್ನು ಇಟ್ಟುಕೊಂಡು ಬರೆಯಬೇಕು ಎಂಬುದು ಬಹಳ ಮಹತ್ವದ ವಿಚಾರವಾಗಿದೆ ಎಂದು ಸಾಹಿತಿ ಹಾಗೂ ರಾಜ್ಯ ಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ ಹೇಳಿದರು.

ದಾವಣಗೆರೆ ಲಿಟರರಿ ಫೋರಂ ಹಾಗೂ ಅರಸೀಕೆರೆಯ ಅರಸಿ ಸಾಂಸ್ಕೃತಿಕ ವೇದಿಕೆ ಸಂಯುಕ್ತಾಶ್ರಯದಲ್ಲಿ ನಗರದ ಎಸ್.ಎಸ್. ಲೇಔಟ್‌ನಲ್ಲಿರುವ ಎಂ.ಬಿ.ಎ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ನಡೆದ ಮೊದಲನೇ ದಿನದ ‘ರಾಷ್ಟ್ರೀಯ ಅಕ್ಷರ ಹಬ್ಬ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 75 ವರ್ಷಗಳಲ್ಲಿ ದೇಶವು ವಿಜ್ಞಾನ ಕ್ಷೇತ್ರದಲ್ಲಿ ಬಹು ದೊಡ್ಡ ಸಾಧನೆ ಮಾಡಿದೆ. ವೈಜ್ಞಾನಿಕ ಚಿಂತನೆಗೆ ಪ್ರಪಂಚದಲ್ಲೇ ಭಾರತ ಮುಂಚೂಣಿ ಆಗಬೇಕು ಎನ್ನುವ ಸ್ಪರ್ಧೆಗೆ ಇಳಿದಿದೆ. ಇದರ ನಡುವೆ ದೇಶದ ಸಾಮಾನ್ಯ ಜನರ ತೊಳಲಾಟ ಏನೇನಿವೆ ಎಂಬ ಚಿಂತನೆ ಬಹಳ ಮಹತ್ವದ್ದು ಎಂದು ತಿಳಿಸಿದರು.

ಧರ್ಮಗಳು ಭಾರತೀಯರನ್ನು ನಿರಂತರವಾಗಿ ಬಾಧಿಸುತ್ತಾ ಬಂದಿವೆ. ಇಂದಿಗೂ ದೇಶದಲ್ಲಿ ಅಸಮಾನತೆ ಎದ್ದು ಕಾಣುತ್ತಿದೆ. ಧರ್ಮಗಳು ಇದನ್ನು ಇಂದಿಗೂ ಪ್ರಶ್ನೆ ಮಾಡಲಿಲ್ಲ. ಹಾಗಾಗಿ ಸಮಾಜವನ್ನು ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಾಹಿತಿಗಳು ಧ್ವನಿ ಎತ್ತಬೇಕು ಎಂದರು.

ಯಂತ್ರ ನಾಗರಿಕತೆಗೆ ಮಿತಿ ಇರಬೇಕು. ಇದೇ ಸರ್ವಸ್ವ ಆಗಬಾರದು. ಈ ಯಂತ್ರೋತ್ಪಾದನೆಯಿಂದ ಬಹು ಕಸುಬುಗಳು ನಾಶ ಆಗಿವೆ. ಇದೇ ಪರಮ ಶ್ರೇಷ್ಠ ಎಂದು ನಂಬಿದ ಸಾರ್ವಜನಿಕ ಉದ್ಯಮಗಳು ಕುಸಿದು ಬಿದ್ದಿವೆ ಎಂದು ಹೇಳಿದರು.

ಬಹು ಕಸುಬುಗಳನ್ನು ನಂಬಿ ಬದುಕುತ್ತಿರುವಾಗಲೇ ಆಧುನಿಕತೆಯ ಸಮುದ್ರದೊಳಗೆ ಬೀಳಬಹುದು ಎನ್ನುವ ಕಲ್ಪನೆಯನ್ನು ಬಿತ್ತಬೇಕಿದೆ. ಇಂತಹ ಸವಾಲುಗಳನ್ನು ಸಾಹಿತಿಗಳು ಸ್ವೀಕರಿಸಬೇಕು ಎಂದು ಹೇಳಿದರು.

ಲಿವಿಂಗ್ ಟುಗೆದರ್ ಆಧುನಿಕತೆಯ ಮೌನ ಕ್ರಾಂತಿ ಆಗಿದೆ. ಆಧುನಿಕತೆಯ ಹೆಸರಿನಲ್ಲಿ ರೈತರ ಭೂಮಿ ಕಸಿದು ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದೇವೆ. ಲೇಖಕರು ಇಂತಹ ಸಂಗತಿ ಹಾಗೂ ಕ್ರಾಂತಿಯ ಬಗ್ಗೆ ಚಿಂತಿಸಬೇಕಿದೆ ಎಂದರು.

ಗುಲ್ಬರ್ಗ ವಿವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಹೆಚ್. ಟಿ. ಪೋತೆ ಮಾತನಾಡಿ, ಅಕ್ಷರದ ಮಹಾ ಬೆರಗು ಹಾಗೂ ಜ್ಞಾನದ ಸಂಕೇತವೇ ಅಂಬೇಡ್ಕರ್, ಅವರ ಬೆಳಕಿನಲ್ಲಿ ಹಲವು ಲೇಖಕರು ಬೆಳೆದು ಬಂದಿದ್ದೇವೆ ಎಂದು ಹೇಳಿದರು. ದೇಶದ ಜನರು ಬಸವಣ್ಣ, ಗಾಂಧಿ, ಅಂಬೇಡ್ಕರ್ ಹಾಗೂ ಸಂವಿಧಾನವನ್ನು ಇಂದಿಗೂ ಸರಿಯಾಗಿ ಒಪ್ಪಿಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜನರು ಅಂಬೇಡ್ಕರ್ ಅವರನ್ನೇ ಸ್ವೀಕರಿಸ ದಿದ್ದರೇ, ದಲಿತರನ್ನು ಹೇಗೆ ಸ್ವೀಕರಿಸುತ್ತಾರೆ ಮತ್ತು ಶೇ.50ರಷ್ಟಿರುವ ಜನರು ಸಂವಿಧಾನ ಉಳಿಸಲು ಏಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಮಾತನಾಡಿ, ಸರ್ಕಾರಿ ಶಾಲೆಗಳನ್ನು ಸರ್ಕಾರವೇ ಕೊಲ್ಲುತ್ತದೆ. ನಾವು ಮಕ್ಕಳು, ಮೊಮ್ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಶಾಲೆಗೆ ಸೇರಿಸಿ ಸರ್ಕಾರವನ್ನು ದೂಷಿಸುವುದು ಎಷ್ಟು ಸರಿ ಎಂದರು.

ಲೇಖಕರು, ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿದರೆ ವ್ಯವಸ್ಥೆ ಬದಲಾಗುತ್ತದೆ. ಆಗ ಸರ್ಕಾರಿ ಶಾಲೆಗಳ ಉದ್ಧಾರವಾಗುತ್ತದೆ ಎಂದು ಹೇಳಿದರು.ಸಂವಿಧಾನದ ಶಕ್ತಿಯೇ ಒಳಗೊಳ್ಳುವಿಕೆ. ಹಾಗಾಗಿ ಒಳಗೊಳ್ಳುವಿಕೆಯನ್ನು ಒಪ್ಪದೇ ಇರುವವರು ಸಂವಿಧಾನ ವಿರೋಧಿಗಳಾಗಿದ್ದಾರೆ ಎಂದರು.

ಈ ವೇಳೆ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಕಾರ್ಯಕ್ರಮ ಸಂಯೋಜಕ ಶ್ರೀಹರ್ಷ ಸಾಲಿಮಠ, ಲೇಖಕರಾದ ಚಾಂದಿನಿ, ಉದಯ ಇಟಗಿ, ವಿವಿಧ ಲೇಖಕರು, ಚಿಂತಕರು ಇದ್ದರು.

# ಸಂಸ್ಕಾರವೇ ಆಧುನಿಕ ಶಿಕ್ಷಣದ ಅಡಿಪಾಯವಾಗಲಿ



ದಾವಣಗೆರೆ, ಫೆ. 7 - ಸಂಸ್ಕಾರವೇ ಆಧುನಿಕ ಶಿಕ್ಷಣದ ಅಡಿಪಾಯವಾಗಬೇಕಾಗಿದೆ. ತಾಯಂದಿರು ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುವುದು ಬಹುಮುಖ್ಯವಾಗಿದೆ. ಹೆತ್ತವರ ಋಣ ತೀರಿಸಲು ಸಾಧ್ಯವಾಗದಿದ್ದರೂ, ಜನ್ಮಕೊಟ್ಟ ದೇಶದ, ನಮ್ಮ ಭಾಷೆಯ, ಅನ್ನಕೊಟ್ಟ ರೈತರ, ಬದುಕನ್ನು ಕೊಟ್ಟ ಭಗವಂತನ ಋಣವನ್ನಾದರೂ ತೀರಿಸುವ ಪ್ರಯತ್ನ ಮಾಡಬೇಕೆಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಮಹಾಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನುಡಿದರು.

ನಗರದ ಬಿಜೆಎಂ ಸ್ಕೂಲ್ ಮತ್ತು ಜಿಎನ್‌ಬಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ‘ಅರಿವಿನ ಉತ್ಸವ’ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಭಗವಂತ ಜ್ಞಾಪಕ ಶಕ್ತಿ ನೀಡಿದ್ದಾನೆ. ಅದನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಪ್ರತಿಯೊಬ್ಬ ಮಗುವಿನಲ್ಲಿ ಐಕ್ಯೂ ಇದ್ದೇ ಇರುತ್ತದೆ. ಅಂತಹ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಮಕ್ಕಳನ್ನು ತರಬೇತುಗೊಳಿಸುವ ಅಗತ್ಯವಿದೆ ಎಂದರು.

ವೈದ್ಯರಾಗಿ, ಇಂಜಿನಿಯರಾಗಿ, ಉದ್ಯಮಿಗಳಾಗಿ, ಐಎಎಸ್, ಕೆಎಎಸ್ ಏನಾದರೂ ಆಗಿ. ಜನ್ಮ ನೀಡಿದ ತಂದೆ-ತಾಯಿಗಳನ್ನು ನಿರ್ಲಕ್ಷೆ ಮಾಡದೇ, ಸಮಾಜದಲ್ಲಿ ‘ರಿಮಾರ್ಕ್’ ಬರದಂತೆ ನಡೆದುಕೊಳ್ಳುವುದು ಮುಖ್ಯ. ಸಮಾಜದಲ್ಲಿ ತಲೆ ಎತ್ತಿ ಬಾಳುವಂತಾಗಬೇಕೆಂಬುದು ನಮ್ಮ ಆಶಯವಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಸಮಾಜದಲ್ಲಿ ಶಿಕ್ಷಣವಂತರು, ಬುದ್ಧಿವಂತರೆನಿಸಿಕೊಂಡವರೇ ಮೋಸದ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ಇದನ್ನು ನೋಡಿದರೆ, ಪುಸ್ತಕದ ಬದನೆಕಾಯಿ ಪ್ರಯೋಜನಕ್ಕೆ ಬಾರದು ಎಂದು ಎನಿಸುತ್ತದೆ. ಮನುಷ್ಯನಿಗೆ ಎಡ ಮತ್ತು ಬಲ ಭಾಗದ ಎರಡು ಮೆದುಳು ಇರುತ್ತವೆ. ಎರಡೂ ಚನ್ನಾಗಿ ಕೆಲಸ ಮಾಡಬೇಕು. ಯಾರಿಗೆ ಬಲ ಭಾಗದ ಮೆದುಳು ಚನ್ನಾಗಿ ನಿರ್ವಹಿಸುತ್ತದೆಯೋ ಅಂತಹವರು ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದರು.

ಕಲಿಕೆ ನಿರಂತರವಾಗಿರಬೇಕು. ಮಗ್ಗಿ ಪಾಠ ಆಗಬಾರದು. ಯಾರು ಮಗ್ಗಿ ಪಾಠ ಮಾಡುತ್ತಾರೋ ಅವರು ಜೀವನದಲ್ಲಿ ಮುಂದೆ ಬರಲು ಸಾಧ್ಯವಿಲ್ಲ. ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಆಟಗಳನ್ನಾಡಬೇಕು. ಆವಾಗ ಮೆದುಳು ಬೆಳವಣಿಗೆಯಾಗುತ್ತದೆ. ಮಗು ಸೋಲುವುದನ್ನು ಕಲಿಯಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಅದು ಜೀವನದ ನಿಜವಾದ ಪಾಠ ಎಂದು ಹೇಳಿದರು.

ಇಂಡಿಯಾ ಬುಕ್ ಆಫ್ ರೆಕಾರ್ಡ್-2023 ರ, ನವಲಗುಂದದ ಬಾಲ ಪ್ರತಿಭೆ, ಗ್ರ್ಯಾಂಡ್ ಮಾಸ್ಟರ್ ಆರ್ಯವರ್ದನ್ ಕೋಟಿ ಅವರಿಗೆ ‘ಸಂಗಮಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸವಣೂರು ತಾಲ್ಲೂಕು ತವರ ಮಳ್ಳಿಹಳ್ಳಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕಿ ಪುಷ್ಪಮಾಲ ಆರ್ . ಚಂದ್ರಗಿರಿ ಹಾಗೂ ಗದಗ ಜೇಸಿ ಪ್ರೌಢಶಾಲೆಯ ಶಿಕ್ಷಕಿ ದಾನಮ್ಮ ಚಂದ್ರಶೇಖರ ತೆಗ್ಗಿನಕೇರಿ ಇವರಿಗೆ ‘ಅತ್ಯುತ್ತಮ ಶಿಕ್ಷಕಿ’ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಇದೇ ವೇಳೆ ಬಿಜೆಎಂ ಶಾಲೆಯ ಹಿರಿಯ ವಿದ್ಯಾರ್ಥಿಗಳಾದ ಡಾ.ಕೆ.ಎಸ್. ಸ್ಫೂರ್ತಿ, ಡಾ. ಎಂ.ಎಸ್. ಮೊಹಮ್ಮದ್ ಅಫ್ರಿದ್, ಆರ್.ಆರ್. ಶಿವಶಂಕರ್, ಡಿ.ಎಂ. ಕಾವ್ಯ, ಎಸ್. ಚೈತ್ರಾ, ರಾಹುಲ್, ಆರ್.ಕಾವ್ಯ ಮತ್ತಿತರರಿಗೆ ‘ಬಿಜೆಎಂ ಸಾಧನಶ್ರೀ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಎಸ್ಪಿ (ಇಂಟಲಿಜೆನ್ಸಿ) ವೇದಮೂರ್ತಿ ಮಾತನಾಡಿದರು. ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಎಂ.ಎಸ್. ಸಂತೋಷ್ ಕುಮಾರ್ ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿಗಳು ವಚನ ನೃತ್ಯ ಪ್ರದರ್ಶಿಸಿದರು. ಮುಖ್ಯ ಶಿಕ್ಷಕಿ ಗೀತಾಂಜಲಿ ಸ್ವಾಗತಿಸಿದರು. ದಾಕ್ಷಾಯಿಣಿ ಜಿ. ಕಮ್ಮಾರ್ ನಿರೂಪಿಸಿದರು. ಪಿಎಲ್‌ಇ ಟ್ರಸ್ಟ್ ಗೌರವ ಕಾರ್ಯದರ್ಶಿ ಮಂಜುನಾಥ ಅಗಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.



## ವಾಲ್ಮೀಕಿ ಜಾತ್ರೆ ಯಶಸ್ವಿಗೆ ಹರಪನಹಳ್ಳಿ ತಾ. ಸಮಾಜ ಕರೆ

ಹರಿಹರ ತಾ. ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಮತ್ತು ರಾಜ್ಯ ಮಟ್ಟದ 7ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವವು ಇಂದು ಮತ್ತು ನಾಳೆ ನಡೆಯ ಲಿದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣ್ಣಪ್ಪ ಹಾಗೂ ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷ ಹಿರೇಮೇ ಗಳಗೆರೆ ಲಕ್ಕಳ್ಳಿ ಹನುಮಂತಪ್ಪ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಘಟಕದ ಅಧ್ಯಕ್ಷರಾದ ಹಲವಾಗಲು ಹೆಚ್.ಟಿ.ವನಜಾಕ್ಷಮ್ಮ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಶಿರಹಟ್ಟಿ ದಂಡೆಪ್ಪ, ಹಲವಾಗಲು ಹೆಚ್.ಟಿ. ಗಿರೀಶಪ್ಪ, ಕೆ. ಉಚ್ಚಂಗೆಪ್ಪ, ಕಾರ್ಯದರ್ಶಿ ಜಿಟ್ಟಿನಕಟ್ಟಿ ಹೆಚ್.ಕೆ. ಮಂಜುನಾಥ, ಉಪಾಧ್ಯಕ್ಷರಾದ ಮಂಡಕ್ಕಿ ಸುರೇಶ, ಖಜಾಂಚಿ ಬಾಲೇನಹಳ್ಳಿ ರೇವಣಸಿದ್ದಪ್ಪ, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಯಡಿಹಳ್ಳಿ ರಾಮಪ್ಪ, ಮುಖಂಡರಾದ ನಿಟ್ಟೂರು ಸಣ್ಣಹಾಲಪ್ಪ, ಆಲದಹಳ್ಳಿ ಷಣ್ಮುಖಪ್ಪ, ಬಾಗಳಿ ಆನಂದಪ್ಪ, ತೆಲಗಿ ಅಂಜಿನಪ್ಪ, ಶಿವಪ್ಪ, ಯಡಿಹಳ್ಳಿ ಶೇಖರಪ್ಪ, ಟಿ. ಪದ್ಮಾವತಿ, ಮಂಜುಳಾ, ಶೋಭಾ, ಪಣಿಯಾಪುರ ಲಿಂಗರಾಜ್, ಬಾಲೇನಹಳ್ಳಿ ಕೆಂಚನಗೌಡ, ದ್ಯಾಮಜ್ಜಿ ಹನುಮಂತಪ್ಪ ಸೇರಿದಂತೆ ಇತರರು ಇದ್ದರು.

## ವಾಲ್ಮೀಕಿ ಜಾತ್ರೆ : ಮುಖಂಡರ ಶುಭಾಶಯ

ದಾವಣಗೆರೆ, ಫೆ. 7 - ರಾಜನಹಳ್ಳಿ ವಾಲ್ಮೀಕಿ ಶ್ರೀಮಠದಲ್ಲಿ ನಡೆಯುವ ವಾಲ್ಮೀಕಿ ಜಾತ್ರೆಗೆ ಕಾಂಗ್ರೆಸ್ ಮುಖಂಡರು ಶುಭ ಕೋರಿ ಕಾರ್ಯ ಕ್ರಮಗಳು ಯಶಸ್ವಿಯಾಗಲೆಂದು ಹಾರೈಸಿ, ಶ್ರೀಗಳ ಆಶೀರ್ವಾದ ಪಡೆದರು. ಇಂದು ವಾಲ್ಮೀಕಿ ಶ್ರೀಮಠದ ಮಹಾಸ್ವಾಮಿಗಳವರನ್ನು ಭೇಟಿ ಮಾಡಿದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮಹಾಪೌರ ಕೆ. ಚಮನ್ ಸಾಬ್, ಪಾಲಿಕೆ ಸದಸ್ಯ ಎ.ನಾಗರಾಜ್, ಕಾಂಗ್ರೆಸ್ ಮುಖಂಡರಾದ ಗಣೇಶ್ ಹುಲ್ಮನಿ, ರುದ್ರೇಶ್, ಚೇತನ್ ಕುಮಾರ್ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.



## ‘ದಾವಣಗೆರೆ ಗೃಹಿಣಿ’ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಫೆ.7- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾರ್ಚ್ 8 ಶನಿವಾರ, 9 ಭಾನುವಾರ ದಾವಣಗೆರೆ ಗೃಹಿಣಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ಮಹಿಳೆಯರು ಇದೇ ದಿನಾಂಕ 25 ರೊಳಗೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 97438 97578.

### ಓದುಗರ ಪತ್ರ

## ನಗರದ ವೃತ್ತಗಳಲ್ಲಿ ಸಿಗ್ನಲ್ ಮಾರ್ಕಿಂಗ್ ಇರಲಿ



**ಮಾನ್ಯರೇ,**

ರೆಡ್ ಸಿಗ್ನಲ್ ಜಂಪ್ ಮಾಡಿದ ಸವಾರರಿಗೆ ಕೇವಲ ಒಂದೇ ಗಂಟೆಯಲ್ಲಿ ಹತ್ತು ಸಾವಿರಕ್ಕಿಂತಲೂ ಹೆಚ್ಚಿನ ಮೊತ್ತದ ದಂಡವನ್ನು ವಿಧಿಸಿದ್ದು, ಉತ್ತಮವಾದ ಸಂಗತಿಯಾಗಿರುತ್ತದೆ. ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆಯೂ ನಗರದಲ್ಲಿ ಹೆಚ್ಚುತ್ತಲೇ ಇದೆ. ವಾಹನ ದಟ್ಟಣೆ ಹೆಚ್ಚಾಗಿರುವ ಕಾರಣ ಸವಾರರು ದಿನದ ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಕಚೇರಿಗೆ ಹೋಗುವ ಮತ್ತು ಮನೆಗೆ ಹಿಂತಿರುಗುವ ಧಾವಂತದಲ್ಲಿ ಸಿಗ್ನಲ್’ಗಳನ್ನು ನಿರ್ಲಕ್ಷಿಸಿ ವಾಹನವನ್ನು ಚಲಾಯಿಸುವುದು ಸಾಮಾನ್ಯ ಸಂಗತಿ ಆಗಿದೆ.

ಅಕ್ರಮವಾಗಿ ಸಿಗ್ನಲ್ ಜಂಪ್ ಮಾಡುವ ಸವಾರರಿಗೆ ದಂಡ ಹಾಕುವ ಜೊತೆ ಜೊತೆಗೆ ಜಮಾ ಆಗುವ ದಂಡದ ಮೊತ್ತದಲ್ಲಿ ವೈಜ್ಞಾನಿಕವಾಗಿ ಸಿಗ್ನಲ್ ಜಂಕ್ಷನ್ ಸ್ಥಳಗಳಲ್ಲಿ ರಸ್ತೆಗಳ ಮೇಲೆ ಕ್ರಮಬದ್ಧವಾಗಿ ಹಳದಿ ಮತ್ತು ಬಿಳಿ ಪೈಂಟ್ ಮೂಲಕ ಮಾರ್ಕಿಂಗ್ ಮಾಡಬೇಕು. ಹಾಗೆಯೇ ಸಿಗ್ನಲ್ ಬಿದ್ದಾಗ ಪಾದಚಾರಿಗಳಿಗೆ ರಸ್ತೆ ದಾಟಲು ನಿರ್ದಿಷ್ಟವಾದ ಪಥಗಳ ಮಾರ್ಕಿಂಗ್ ಇರದೇ ವಯೋವೃದ್ಧರು, ಮಕ್ಕಳು ಗೊಂದಲದಿಂದ ರಸ್ತೆಯನ್ನು ದಾಟುವುದನ್ನು ನಿತ್ಯ ಕಾಣಬಹುದಾಗಿದೆ.

ಆದ್ದರಿಂದ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ರಾಜಧಾನಿಯಲ್ಲಿ ಇರುವ ಹಾಗೇ ನಗರದ ವೃತ್ತಗಳಲ್ಲಿ ಈ ಕೂಡಲೇ ಕ್ರಮಬದ್ಧ ಮಾರ್ಕಿಂಗ್, ಕೇಳುವ ಹಾಗೇ ಸಂದೇಶಗಳನ್ನು ಅಳವಡಿಸುವ ಮೂಲಕ ಸವಾರರಲ್ಲಿ ಸಿಗ್ನಲ್ ಬಗ್ಗೆ ಜಾಗೃತಿ ಮೂಡಿಸಬೇಕಿದೆ ಮತ್ತು ವಾಹನ ಸವಾರರು ಕೂಡ ನಿಯಮಗಳನ್ನು ತಪ್ಪದೇ ಪಾಲಿಸಬೇಕಿದೆ.

- **ವೈ. ವಾದಿರಾಜ ಭಟ್**, ವಕೀಲರು, ದಾವಣಗೆರೆ.

## ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ವರುಣ್ ಬೆಣ್ಣೆಹಳ್ಳಿ

**(1ನೇ ಪುಟದಿಂದ)** ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ದಾವಣಗೆರೆ ಜಿಲ್ಲಾ ಯುವ ಕಾಂಗೆಸ್ ಅಧ್ಯಕ್ಷರಾಗಿ ಚುನಾಯಿತಗೊಂಡಿದ್ದಾರೆ. ವರುಣ್ ಅವರಿಗೆ ಒಟ್ಟು 11,786 ಮತಗಳು ಲಭಿಸಿವೆ.

ವರುಣ್, ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರಾಗಿದ್ದ ದಿ. ಶ್ರೀಮತಿ ಲಲಿತಮ್ಮ ತಿಪ್ಪೇಸ್ವಾಮಿ ಮತ್ತು ಕಾಂಗ್ರೆಸ್ ಹಿರಿಯ ಮುಖಂಡ ತಿಪ್ಪೇಸ್ವಾಮಿ ಬೆಣ್ಣೆಹಳ್ಳಿ ದಂಪತಿ ಪುತ್ರ.

ನೂತನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವರುಣ್ ಅವರ ಪ್ರತಿಸ್ಪರ್ಧಿಯಾಗಿದ್ದ ಹಿರಿಯ ಕಾಂಗ್ರೆಸ್ ಮುಖಂಡ ಸಾಧಿಕ್ ಪೈಲ್ವಾನ್ ಅವರ ಪುತ್ರ ಅಲಿ ರೆಹಮಾನ್ ಅವರು 10,067 ಮತಗಳನ್ನು ಗಳಿಸುವುದರ ಮೂಲಕ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ದಾವಣಗೆರೆ ಜಿಲ್ಲಾ ಯುವ ಕಾಂಗೆಸ್ ಅಧ್ಯಕ್ಷ ಸ್ಥಾನಕ್ಕೆ ಒಟ್ಟು 13 ಜನರು ಸ್ಪರ್ಧಿಸಿದ್ದರು. ವರುಣ್ ಮತ್ತು ಅಲಿ ರೆಹಮಾನ್ ಅವರುಗಳಲ್ಲದೇ, ನವೀನ್ ನಲವಾಡಿ (6,223), ಶಿವ ರತನ್ (2,751), ಬಿಲಾಲ್ ಖಾನ್ (2,508), ತಾಹೀರ್ ಸಮೀರ್ (2,161), ಚಿರಂಜೀವಿ (1,887), ಹೀನಾ ಕೌಸರ್ (1,522), ಡಿ.ಸಿ. ರಾಕೇಶ್ (488), ಪ್ರವೀಣ್ ಕುಮಾರ್ ಜಗಳೂರು (461), ಸೈಯದ್ ಮುಬಾರಕ್ (315), ಶಶಿಧರ ಪಾಟೀಲ್ (261) ಮತ್ತು ಟಿ. ಎನ್. ಗಿರಿಧರ್ (71) ಸ್ಪರ್ಧಿಸಿದ್ದರು.

## ಇಂದು ಗುರುಕುಲ ವೈಭವ

ಗುರುಕುಲ ವಸತಿಯುತ ಶಾಲೆ ವತಿಯಿಂದ ಗುರುಕುಲ ವೈಭವ 2ಕೆ 25 -2025 ಕಾರ್ಯಕ್ರಮವನ್ನು ಹೈಸ್ಕೂಲ್ ಮೈದಾನದಲ್ಲಿ ಇಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಎಂ. ಗಂಗಾಧರಸ್ವಾಮಿ,ಉಮಾ ಪ್ರಶಾಂತ್, ಕೆ. ಚಮನ್ ಸಾಬ್, ದಿನೇಶ್ ಕೆ. ಶೆಟ್ಟಿ, ಗಾಯತ್ರಿ, ಜಿ. ಕೊಟ್ರೇಶ್, ಎನ್. ಪುಷ್ಪಲತಾ, ಆನಂದ ಸಿ ಭಜಂತ್ರಿ, ಶರಣ ಬಸವೇಶ್ವರಯ್ಯ, ಕೆಜಿ ಯಲ್ಲಪ್ಪ, ಎಂ.ಎಸ್. ರಾಮೇಗೌಡ, ಸವಿತಾ, ನಾಗರಾಜ್ ಆಗಮಿಸುವರು.

## ಇಂದು ‘ಶಿವಗೋಷ್ಠಿ-315 ಹಾಗೂ ಸ್ಮರಣೆ-90’

ಶಿವಗೋಷ್ಠಿ ಸಮಿತಿ ಹಾಗೂ ಸಾದರ ನೌಕರರ ಬಳಗದ ವತಿಯಿಂದ ತರಳಬಾಳು ಬಡಾವಣೆಯ ಶಿವಕುಮಾರ ಸ್ವಾಮೀಜಿ ಮಹಾಮಂಟಪದಲ್ಲಿ ಫೆ.8ರ ಇಂದು ಸಂಜೆ 6.30ಕ್ಕೆ ‘ಶಿವಗೋಷ್ಠಿ-315 ಹಾಗೂ ಸ್ಮರಣೆ-90’ ಮಾಸಿಕ ಕಾರ್ಯಕ್ರಮ ನಡೆಯಲಿದೆ.

ಮಾಗನೂರು ಪಬ್ಲಿಕ್ ಟ್ರಸ್ಟಿನ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ನಿವೃತ್ತ ಪ್ರಾಧ್ಯಾಪಕಿ ಸುಮತಿ ಜಯ್ಯಪ್ಪ ಅವರು ‘ತರಳಬಾಳು ಹುಣ್ಣಿಮೆ ನಡೆದು ಬಂದ ದಾರಿ’ ಎಂಬ ವಿಷಯದಡಿ ಉಪನ್ಯಾಸ ನೀಡಲಿದ್ದಾರೆ.

## ಹರಿಹರ ತಾ.ನಲ್ಲಿ ವಿದ್ಯುತ್ ವ್ಯತ್ಯಯ

ಹರಿಹರ ತಾಲ್ಲೂಕು ಭಾನುವಳ್ಳಿ ಕಮಲಾಪುರ, ಹೊಳೆಸಿರಿಗೆರೆ, ಲಕ್ಕರೆಟ್ಟಿಹಳ್ಳಿ, ರಾಮತೀರ್ಥ, ನಾಗೇನಹಳ್ಳಿ ಈ ಗ್ರಾಮಗಳಿಗೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಕೃಷಿ ಉತ್ಸವ ಮುಂದೂಡಿಕೆ

ದಾವಣಗೆರೆ, ಫೆ.7- ಹಸಿರೋತ್ಸವ ಫೋರಮ್‌ನಿಂದ ಇದೇ ದಿನಾಂಕ 19ರಿಂದ 23ರವರೆಗೆ ನಿಗದಿಯಾಗಿದ್ದ ಕೃಷಿ ಉತ್ಸವವನ್ನು ಮುಂದೂಡಲಾಗಿದೆ.



# ಆಯುಷ್ಮಾನ್‌ಗೆ ಹಿಂದುಳಿದವರನ್ನು ಪರಿಗಣಿಸಿ



**ಸಂಸತ್‌ನಲ್ಲಿ ಸಂಸದೆ ಡಾ. ಪ್ರಭಾ ಎಸ್ಸೆಸ್ಸೆಂ**

ದಾವಣಗೆರೆ/ನವದೆಹಲಿ, ಫೆ. 7 - ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರ ಜೊತೆಗೆ, ಆರ್ಥಿಕವಾಗಿ ಹಿಂದುಳಿದವರನ್ನೂ ಪರಿಗಣಿಸಬೇಕೆಂದು ದಾವಣಗೆರೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಪ್ರಸ್ತುತ ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಮಾತ್ರ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಲಭ್ಯವಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ಬಡವರನ್ನು ನಿರ್ಲಕ್ಷಿಸಲಾಗಿತ್ತು.

ಇದನ್ನು ಮನಗಂಡ ಡಾ. ಪ್ರಭಾ ಅವರು, ನವದೆಹಲಿಯ ಸಂಸತ್ತಿನ ಅಧಿವೇಶನದ ಪ್ರಶ್ನೋತ್ತರ ಅವಧಿಯಲ್ಲಿ ಕೇಂದ್ರ ಆರೋಗ್ಯ ಸಚಿವರಾದ ಜೆ.ಪಿ. ನಡ್ಡಾ ಅವರ ಗಮನ ಸೆಳೆಯುವ ಪ್ರಶ್ನೆಯನ್ನು ಮುಂದಿಟ್ಟಿದ್ದಾರೆ.

ಆರ್ಥಿಕವಾಗಿ ಹಿಂದುಳಿದವರಿಗೂ ಆಯುಷ್ಮಾನ್ ಭಾರತ್ ನೀಡುವ ಒತ್ತಾಯದ ಜೊತೆಯಲ್ಲಿ ವೈದ್ಯರು, ಸಂಪನ್ಮೂಲಗಳು ಮತ್ತು ಮೂಲ ಸೌಕರ್ಯಗಳ ಕೊರತೆಯನ್ನು ಪರಿಹರಿಸಲು ತೆಗೆದುಕೊಂಡ ಕ್ರಮಗಳು, ರಾಜ್ಯವಾರು ಮಾಹಿತಿಯನ್ನು ಕೇಂದ್ರ ಆರೋಗ್ಯ ಸಚಿವರಲ್ಲಿ ಕೇಳಿದ್ದಾರೆ. ಈ ಮಧ್ಯೆ ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರು ಪ್ರಥಮಾರ್ಧದ ಪ್ರಶ್ನೆಯನ್ನು ಮತ್ತೊಮ್ಮೆ ಪುನರುಚ್ಚರಿಸುವಂತೆ ಮನವಿ ಮಾಡಿ ಹಂತ ಹಂತವಾಗಿ ಪರಿಶೀಲಿಸುವುದಾಗಿ ತಿಳಿಸಿದ್ದಾರೆ.

ಪ್ರಭಾ ಅವರ ಪ್ರಶ್ನೆಯ ಪ್ರಾಮುಖ್ಯತೆಯನ್ನು ಮನಗಂಡ ಕೇಂದ್ರ ಸಚಿವರು, ಪ್ರಥಮಾರ್ಧದ ಪ್ರಶ್ನೆಯನ್ನು ಪುನರುಚ್ಚರಿಸುವಂತೆ ಕೇಳಿರುವುದು ವಿಶೇಷವಾಗಿದೆ.

# ನಗರದ ಎಸ್‌ಬಿಸಿ ಕಾಲೇಜ್‌ನಲ್ಲಿ ಇಂದು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರಿಂದ ಉಪನ್ಯಾಸ



ಅಧಿವಕ್ತ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ, ಜಿಲ್ಲಾ ಘಟಕ, ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಅಥಣಿ ಸ್ನಾತಕೋತ್ತರ ಕೇಂದ್ರ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜು ಸಭಾಂಗಣದಲ್ಲಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಕಾರ್ಯಕ್ರಮ ಉದ್ಘಾಟಿಸಿ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಮಹಿಳೆಯ ಪಾತ್ರ ಕುರಿತು ಉಪನ್ಯಾಸ ನೀಡಲಿದ್ದಾರೆ.

ಅಧಿವಕ್ತ ಪರಿಷತ್ ಜಿಲ್ಲಾಧ್ಯಕ್ಷ ಎಲ್.ದಯಾನಂದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ವಿನಾಯಕ ಎಜುಕೇಷನ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ. ಅಥಣಿ ವೀರಣ್ಣ ಭಾಗವಹಿಸುವರು. ಬಿ.ಸಿ. ಉಮಾಪತಿ, ಎನ್.ಎ. ಮುರುಗೇಶ್, ಆರ್. ಯೋಗೇಶ್ವರಪ್ಪ, ಎಂ.ಎಸ್. ಮನೋಜ್ ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

## ಐಟಿ ಮಸೂದೆಗೆ ಸಂಪುಟ ಒಪ್ಪಿಗೆ

ನವದೆಹಲಿ, ಫೆ. 7 - ಆರು ದಶಕಗಳ ಹಳೆಯ ಆದಾಯ ತೆರಿಗೆ ಕಾಯ್ದೆ ಬದಲಿಸಲು ರೂಪಿಸಲಾಗಿರುವ ಹೊಸ ಮಸೂದೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲ ಗಳು ತಿಳಿಸಿವೆ. ಈ ಮಸೂದೆಯ ಮೂಲಕ ಆದಾಯ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಲು ಉದ್ದೇಶಿಸಲಾಗಿದೆ. ಹೊಸ ತೆರಿಗೆ ಪದ್ಧತಿಯಿಂದ ತೆರಿಗೆದಾರರ ಮೇಲೆ ಯಾವುದೇ ಹೊಸ ಹೊರೆಯಾಗುವುದಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ನೂತನ ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಮುಂದಿನ ವಾರ ಸಂಸತ್ತಿನಲ್ಲಿ ಮಸೂದೆ ಮಂಡಿಸಲಾಗುವುದು ಹಾಗೂ ಹಣಕಾಸು ಕುರಿತ ಸಂಸತ್ತಿನ ಸ್ಥಾಯಿ ಸಮಿತಿ ಪರಿಶೀಲನೆಗೆ ವಹಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

## ಹೊನ್ನಾಳಿಯಲ್ಲಿ ಇಂದು ದಿಂಡಿ ಉತ್ಸವ

ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ಇಂದಿನಿಂದ ಮೂರು ದಿನ 107ನೇ ದಿಂಡಿ ಮಹೋತ್ಸವ ನಡೆಯಲಿದೆ ಎಂದು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಹೆಚ್.ಪಿ ಶ್ರೀಹರ ಹೊವಳೆ ತಿಳಿಸಿದ್ದಾರೆ.


ಧೀಯೋಯೋನಃ ಪ್ರಚೋದಯಾತ್

**ಬ್ರಾಹ್ಮಣ ಸಮಾಜ ಸೇವಾ ಸಂಘ, ದಾವಣಗೆರೆ**

**ಸ್ಫೂರ್ತಿ 2025**

ಸ್ವಾವಲಂಬನೆಯ ಪರಿಕಲ್ಪನೆ....

**ವಸ್ತು ಪ್ರದರ್ಶನ, ಮಾರಾಟ ಹಾಗೂ ಆಹಾರ ಮೇಳ**

ದಿನಾಂಕ : 09-02-2025, ಭಾನುವಾರ
ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ
ಸ್ಥಳ : ಶ್ರೀ ಶಂಕರ ಸಮುದಾಯ ಭವನ
ಶ್ರೀ ಶಾರದಾಂಬ ದೇವಸ್ಥಾನದ ಪಕ್ಕ
ರಿಂಗ್ ರಸ್ತೆ, ಎಸ್. ನಿಜಲಿಂಗಪ್ಪ ಲೇಔಟ್, ದಾವಣಗೆರೆ.

ಉದ್ಘಾಟನೆ : ಶ್ರೀಯುತ ಅಶೋಕ ಹಾರನಹಳ್ಳಿ
ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಬೆಂಗಳೂರು

ಸ್ಥಳೀಯ ಉದ್ಯಮಿಗಳು ಮತ್ತು ವ್ಯಾಪಾರಸ್ಥರನ್ನು ಪ್ರೋತ್ಸಾಹಿಸಲು ನಾವು ಗೃಹೋಪಯೋಗಿ ವಸ್ತುಗಳ, ಆಭರಣಗಳ, ಸೀರೆ ಮತ್ತು ಇನ್ನಿತರೆ ವಸ್ತು ಪ್ರದರ್ಶನ, ಮಾರಾಟ ಹಾಗೂ ರುಚಿಕರವಾದ ಆಹಾರ ಮೇಳವನ್ನು ಆಯೋಜಿಸಿದ್ದೇವೆ. ಈ ಮೇಳದಲ್ಲಿ ನಿಮ್ಮ ಕುಟುಂಬ ಮತ್ತು ಸ್ನೇಹಿತರೊಡನೆ ಆಗಮಿಸಿ ಸ್ಥಳೀಯ ಉದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ಪ್ರೋತ್ಸಾಹ ಕೊಡಬೇಕಾಗಿ ವಿನಂತಿ. ಆಧಾರ್ ತಿದ್ದುಪಡಿ ಮತ್ತು ಅಂಚೆ ಇಲಾಖೆಯ ಸೇವೆಗಳು ಹಾಗೂ ಬಿ.ಪಿ. ಪರೀಕ್ಷೆ ಉಚಿತವಾಗಿ ಲಭ್ಯವಿರುತ್ತದೆ.

**ಉಚಿತ ಪ್ರವೇಶ**

**ಸರ್ವರಿಗೂ ಸುಸ್ವಾಗತ**



**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ. ಶ್ರೀಮತಿ ಎನ್.ಜಿ. ರತ್ನಮ್ಮನವರು**

ನಿಧನ : 08.02.2024

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ.

ಇಂತಿ ದುಃಖತಪ್ತರು :
ದಾವಣಗೆರೆ ತಾಲ್ಲೂಕು ನರಗನಹಳ್ಳಿ
ಲಿಂ. ಪಟೇಲ್ ರುದ್ರಪ್ಪನವರ ಪುತ್ರರಾದ

- ಶ್ರೀ ಎನ್.ಜಿ. ಬಸವರಾಜಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀ ಎನ್.ಜಿ. ಪುಟ್ಟಸ್ವಾಮಿ ಮತ್ತು ಮಕ್ಕಳು, ಮೊಮ್ಮಕ್ಕಳು
- ಲಿಂ|| ಎನ್.ಜಿ. ಚಂದ್ರಣ್ಣನವರ ಮಕ್ಕಳು, ಮೊಮ್ಮಕ್ಕಳು
- ಶ್ರೀ ಎನ್.ಜಿ. ವಿಜಯ್ ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀ ಎನ್.ಜಿ. ಅಣ್ಣಯ್ಯ ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀಮತಿ ಎನ್.ಜಿ.ವಾಣಿ, ಮೋಹನ್
- ಎನ್.ಜಿ. ವಿನಯ್, ಶ್ರೀಮತಿ ಅರ್ಚನ

ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಗೌಡ್ರ ವಂಶಸ್ಥರು ನರಗನಹಳ್ಳಿ, ಗೌಡ್ರ ವಂಶಸ್ಥರು ಹನುಮನಹಳ್ಳಿ ಹಾಗೂ ಬಂಧು-ಮಿತ್ರರು.

ದಾವಣಗೆರೆ ಸಿದ್ದವೀರಪ್ಪ ಬಡಾವಣೆ, ಬಿಐಇಟಿ ಕಾಲೇಜು ರಸ್ತೆ,
10ನೇ ಕ್ರಾಸ್ (ಭದ್ರಾ ಕಾಲೇಜು ಎದುರು)
ಮೊ : 99645 97177, 98440 86632



ಕರ್ನಾಟಕ ಸರ್ಕಾರ



ಜಿಲ್ಲಾ ಪಂಚಾಯತ್, ದಾವಣಗೆರೆ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಾನ್ಯ ಜನಪ್ರಿಯ ಶಾಸಕರು ಹಾಗೂ ಮಾಜಿ ಸಚಿವ

**ಸನ್ಮಾನ್ಯ ಶ್ರೀ ಡಾ|| ಶಾಮನೂರು ಶಿವಶಂಕರಪ್ಪರವರ**

ಶಿಫಾರಸ್ಸಿನ ಮೇರೆಗೆ 2023-24ನೇ ಸಾಲಿನ ಆಯ-ವ್ಯಯ ಘೋಷಣೆಯಂತೆ ಸಾಮಾನ್ಯ ಯೋಜನೆಯಡಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಯ

**ಭೂಮಿ ಪೂಜೆ ಕಾರ್ಯಕ್ರಮ**

ಕಾಮಗಾರಿ ಹೆಸರು : ದಾವಣಗೆರೆ ತಾ|| ಕುಕ್ಕುವಾಡ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಗೆ ಕೊಠಡಿ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿ.
ಲೆಕ್ಕ ಶಿರ್ಷಿಕೆ : 2023-24ನೇ ಸಾಲಿನ ಆಯ ವ್ಯಯ ಘೋಷಣೆಯಂತೆ ಸಾಮಾನ್ಯ ಯೋಜನೆಯಡಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಭೂತ ಸೌಕರ್ಯ ಯೋಜನೆ.
ಅಂದಾಜು ಮೊತ್ತ : ರೂ. 41.34 ಲಕ್ಷಗಳು
ಗುತ್ತಿಗೆದಾರರ ಕರಾರು ಮೊತ್ತ : ರೂ. 2976334.40 Below (-) 14.50% CSR of 2023-24

ಸ್ಥಳ : ಕುಕ್ಕುವಾಡ ಶಾಲಾ ಆವರಣ
ಸಮಯ : ದಿನಾಂಕ 08.02.2025 ಶನಿವಾರ, ಮಧಾಹ್ನ 12.30 ಗಂಟೆಗೆ

**ಅಧ್ಯಕ್ಷರು ಮತ್ತು ಸರ್ವ ಸದಸ್ಯರುಗಳು,**
**ಗ್ರಾಮ ಪಂಚಾಯತಿ, ಕುಕ್ಕುವಾಡ.**

ಸರ್ವರಿಗೂ ಆದರದ ಸುಸ್ವಾಗತ





ಕೂಜಂತಂ ರಾಮ ರಾಮೇತಿ। ಮಧುರಂ ಮಧುರಾಕ್ಷರಮ್||
ಆರುಹ್ಯ ಕವಿತಾಶಾಖಾಂ । ವಂದೇ ವಾಲ್ಮೀಕಿ ಕೋಕಿಲಂ||







**ವಾಲ್ಮೀಕಿ ಜಾತ್ರೆ - 2025**

ಶ್ರೀಮಠದ 27 ನೇ ವಾರ್ಷಿಕೋತ್ಸವ
ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾಸ್ವಾಮೀಜಿಯವರ
18 ನೇ ವರ್ಷದ ಪುಣ್ಯಾರಾಧನೆ
ಜಗದ್ಗುರು ಡಾ. ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿಯವರ
17 ನೇ ವರ್ಷದ ಪಟ್ಟಾಧಿಕಾರ ಮಹೋತ್ಸವದ ಆಮಂತ್ರಣ

**ದಿನಾಂಕ : 08.02.2025ನೇ ಶನಿವಾರ**

✦ ಬೆಳಿಗ್ಗೆ 7 ಗಂಟೆಗೆ - ರಾಜನಹಳ್ಳಿಯಿಂದ ಶ್ರೀಮಠದವರೆಗೆ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ✦ ಬೆಳಿಗ್ಗೆ 8 ಗಂಟೆಗೆ - ಶ್ರೀ ಮಹರ್ಷಿ ವಾಲ್ಮೀಕಿ ಧ್ವಜಾರೋಹಣ ✦ ಬೆಳಿಗ್ಗೆ 8.30 ಗಂಟೆಗೆ - ಸರ್ವ ಧರ್ಮ ಸಾಮೂಹಿಕ ವಿವಾಹ ಮಹೋತ್ಸವ ✦ ಬೆಳಿಗ್ಗೆ 9.30 ಗಂಟೆಗೆ - ಕೃಷಿ ವಸ್ತು ಪ್ರದರ್ಶನ ಮೇಳ ✦ ಬೆಳಿಗ್ಗೆ 10 ಗಂಟೆಗೆ - ಉದ್ಯೋಗ ಮೇಳ ✦ ಬೆಳಿಗ್ಗೆ 10.30 ಗಂಟೆಗೆ - ಶ್ರೀ ಮಹರ್ಷಿ ವಾಲ್ಮೀಕಿ ಜೀವನಾಧಾರಿತ ಫಲಪುಷ್ಪ ಪ್ರದರ್ಶನ ಉದ್ಘಾಟನೆ ✦ ಬೆಳಿಗ್ಗೆ 11 ಗಂಟೆಗೆ - ಮಹಿಳಾ ಗೋಷ್ಠಿ ಮತ್ತು ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ✦ ಮಧ್ಯಾಹ್ನ 2.30 ಗಂಟೆಗೆ - ನೌಕರರ ಗೋಷ್ಠಿ ಮತ್ತು ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ✦ ಸಂಜೆ 5.30 ಗಂಟೆಗೆ - ಸಂಘಟನಾ ಗೋಷ್ಠಿ ✦ ರಾತ್ರಿ 8 ಗಂಟೆಯಿಂದ - ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ತಂಡದಿಂದ ರಸಮಂಜರಿ ಕಾರ್ಯಕ್ರಮ ✦ ರಾತ್ರಿ 10.30 ಗಂಟೆಗೆ - ವಾಲ್ಮೀಕಿ ವಿರಚಿತ ಸಂಪೂರ್ಣ ರಾಮಾಯಣ ನಾಟಕ ಪ್ರದರ್ಶನ

**ದಿನಾಂಕ : 09.02.2025ನೇ ಭಾನುವಾರ**

✦ ಬೆಳಿಗ್ಗೆ 6 ರಿಂದ 7 ಗಂಟೆಗೆ - 'ಸ್ವಚ್ಛತಾ ಕಾರ್ಯಕ್ರಮ' ✦ ಬೆಳಿಗ್ಗೆ 7 ರಿಂದ 8 ಗಂಟೆಯವರೆಗೆ - ಪರಮಪೂಜ್ಯ ಜಗದ್ಗುರು ಡಾ. ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳವರ ದರ್ಶನಾಶೀರ್ವಾದ ✦ ಬೆಳಿಗ್ಗೆ 9.00 ಗಂಟೆಗೆ - ಶ್ರೀ ಮಹರ್ಷಿ ವಾಲ್ಮೀಕಿ ಮಹಾರಥೋತ್ಸವ ✦ ಬೆಳಿಗ್ಗೆ 9.30 ಗಂಟೆಗೆ - ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ 'ಧರ್ಮಸಭೆ' ✦ ಬೆಳಿಗ್ಗೆ 12.30 ಗಂಟೆಗೆ - ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ 'ಬೃಹತ್ ಜನ ಜಾಗೃತಿ ಸಮಾವೇಶ' ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ.

ಎರಡು ದಿನಗಳ ಕಾಲ ನಡೆಯುವ ಜನ ಜಾಗೃತಿಯ ವಾಲ್ಮೀಕಿ ಜಾತ್ರೆಗೆ ಆಗಮಿಸುವ ಎಲ್ಲಾ ಪೂಜ್ಯ ಮಠಾಧೀಶರಿಗೆ, ಜನಪ್ರತಿನಿಧಿಗಳಿಗೆ, ಸಾಹಿತಿಗಳಿಗೆ, ಹೋರಾಟಗಾರರಿಗೆ, ಅಧಿಕಾರಿಗಳಿಗೆ, ಕಲಾವಿದರಿಗೆ ಮತ್ತು ಸಮಸ್ತ ಬಂಧುಗಳಿಗೆ ಹೃದಯಪೂರ್ವಕ ಸುಸ್ವಾಗತ.



**ಶ್ರೀ ಬಿ.ದೇವೇಂದ್ರಪ್ಪ**
ಶಾಸಕರು, ಜಗಳೂರು
ಅಧ್ಯಕ್ಷರು, ಶ್ರೀ ವಾಲ್ಮೀಕಿ ಜಾತ್ರಾ ಸಮಿತಿ,
ರಾಜನಹಳ್ಳಿ

**ಶ್ರೀನಿವಾಸ ದಾಸಕರಿಯಪ್ಪ**
ಬಿಜೆಪಿ ಮುಖಂಡರು, ದಾವಣಗೆರೆ
ಸಂಚಾಲಕರು, ಶ್ರೀ ವಾಲ್ಮೀಕಿ ಜಾತ್ರಾ ಸಮಿತಿ,
ರಾಜನಹಳ್ಳಿ



ಆಡಳಿತಾಧಿಕಾರಿಗಳು ಹಾಗೂ ಧರ್ಮದರ್ಶಿಗಳು, ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ

**ದಿನಾಂಕ : 08 ಮತ್ತು 09 ಫೆಬ್ರವರಿ 2025, ಸ್ಥಳ : ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ (ತಾ), ದಾವಣಗೆರೆ (ಜಿ).**


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas